# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜನವರಿ 20, 2021

ಸಂಪುಟ : 47 ಸಂಚಿಕೆ : 261 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




# ಕುರುಬರಿಗೆ ಎಸ್ಟಿ ; ಸೂರ್ಯನಷ್ಟೇ ಸತ್ಯ

## ಐದನೇ ದಿನದ ಪಾದಯಾತ್ರೆಯಲ್ಲಿ ಕನಕ ಗುರುಪೀಠದ ಜಗದ್ಗುರು ನಿರಂಜನಾನಂದಪುರಿ ಸ್ವಾಮೀಜಿ

ದಾವಣಗೆರೆ, ಜ.19 – ಕುರುಬ ಸಮುದಾಯಕ್ಕೆ ಎಸ್.ಟಿ. ಮೀಸಲಾತಿ ನೀಡಬೇಕೆಂದು ತಾವು ಆರಂಭಿಸಿರುವ ಪಾದಯಾತ್ರೆಗೆ ಅಭೂತಪೂರ್ವವಾಗಿ ಸ್ವಾಗತ ಸಿಗುತ್ತಿದೆ ಎಂದಿರುವ ಕಾಗಿನೆಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜಾನಂದಪುರಿ ಸ್ವಾಮೀಜಿ, ಸಮಾಜಕ್ಕೆ ಎಸ್.ಟಿ. ಸ್ಥಾನ ಸಿಗುವುದು ಸೂರ್ಯ ಹುಟ್ಟುವಷ್ಟೇ ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಾಗಿನೆಲೆಯಿಂದ ಆರಂಭವಾದ ಪಾದಯಾತ್ರೆಯು ಐದನೇ ದಿನ ಸಂಜೆ ನಗರಕ್ಕೆ ತಲುಪಿತ್ತು. ಈ ಸಂದರ್ಭದಲ್ಲಿ ಮೆರವಣಿಗೆಯ ನಂತರ ಬೀರಲಿಂಗೇಶ್ವರ ಮೈದಾನದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಶ್ರೀಗಳು ಮಾತನಾಡುತ್ತಿದ್ದರು.

ಕುರುಬ ಸಮಾಜದ ಎಂಟು ವರ್ಷದ ಮಗುವಿನಿಂದ ಹಿಡಿದು, ಯುವಕರಾದಿಯಾಗಿ 80 ವರ್ಷದ ವೃದ್ಧರವರೆಗೆ ಎಲ್ಲರೂ ಪಾದಯಾತ್ರೆಗೆ ಬೆಂಬಲಿಸುತ್ತಿದ್ದಾರೆ, ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಪಾದಯಾತ್ರೆ ಕುರುಬ ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಪರವಾಗಿದೆ. ಯಾವುದೇ ವ್ಯಕ್ತಿ, ಇಲ್ಲವೇ ಪಕ್ಷದ ಪರ ಅಥವಾ ವಿರುದ್ಧವಲ್ಲ ಎಂದು ಶ್ರೀಗಳು ಹೇಳಿದರು.

ಮೀಸಲಾತಿ ಹೋರಾಟದ ಹಿಂದೆ ಆರ್.ಎಸ್.ಎಸ್. ಪಾತ್ರವಿದೆ ಎಂಬ ಟೀಕೆಗಳನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಶ್ರೀಗಳು, ಯಾವುದೋ ಸಂಘ – ಸಂಸ್ಥೆಯಿಂದ ಹೋರಾಟಕ್ಕೆ ಹಣ ಬಂದಿಲ್ಲ. ಸಮಾಜದ ಕುರುಬರು ಕುರಿಗಳನ್ನು ಮಾರಿ ದೇಣಿಗೆ ನೀಡಿದ್ದಾರೆ. ಪ್ರತಿ ಹಳ್ಳಿಯಲ್ಲಿ - ಜಿಲ್ಲೆಯಲ್ಲಿ ಬಂದಿರುವ ದೇಣಿಗೆಯ ಹಣದ ಬಗ್ಗೆ ಪಾದಯಾತ್ರೆಯ ನಂತರ ಮಾಧ್ಯಮಗಳ ಎದುರು ವಿವರಗಳನ್ನು ನೀಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಸಚಿವ ಹಾಗೂ ಸಮಾಜದ ಮುಖಂಡ ಕೆ.ಎಸ್. ಈಶ್ವರಪ್ಪ, ಕುರುಬರ ಜೊತೆಗೆ ತಮಗೂ ಎಸ್.ಟಿ. ಮೀಸಲಾತಿ ಕಲ್ಪಿಸಬೇಕೆಂದು ಉಪ್ಪಾರ ಹಾಗೂ ಕೋಳಿ ಸಮುದಾಯದವರು ಕೇಳಿದ್ದಾರೆ. ಕುರುಬರು ಸ್ವಾರ್ಥಿಗಳಲ್ಲ. ಅರ್ಹ ಎಲ್ಲರ ಮೀಸಲಾತಿಗಾಗಿ ಹೋರಾಟ ಮಾಡುತ್ತೇವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಉಪ್ಪಾರ ಸಮಾಜದ ಅಧ್ಯಕ್ಷ ತುರ್ಚಘಟ್ಟದ ಬಸವರಾಜಪ್ಪ ಅವರು ಕುರುಬ ಸಮುದಾಯದ ಮೀಸಲಾತಿ ಹೋರಾಟವನ್ನು ಬೆಂಬಲಿಸುವುದಾಗಿ ತಿಳಿಸಿದರು. ಉಪ್ಪಾರ ಸಮಾಜದ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಬೆಂಬಲದ ಮನವಿಯನ್ನು ಶ್ರೀ ನಿರಂಜನಾನಂದಪುರಿ ಶ್ರೀಗಳಿಗೆ ನೀಡಿದರು.

ಹೊಸದುರ್ಗ ಶಾಖಾಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಕುರುಬರು ಭಾರತದ ಮೂಲ ನಿವಾಸಿಗಳು ಎಂಬುದನ್ನು ವಿದೇಶಿ ಸಂಶೋಧಕರು ತಿಳಿಸಿ ಕೊಟ್ಟಿದ್ದಾರೆ. ಇಷ್ಟಾದರೂ ಕುರುಬರು ಎಸ್.ಟಿ. ಮೀಸಲಾತಿಯಿಂದ ವಂಚಿತರಾಗಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಶಕ್ತಿ ಪ್ರದರ್ಶನ ನೋಡಿಯಾದರೂ ಮೀಸಲಾತಿ ಕಲ್ಪಿಸಲಿ ಎಂದು ಒತ್ತಾಯಿಸಿದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಹೋರಾಟಕ್ಕೆ ಕೆಲವರು ಅಡ್ಡಗಾಲು ಹಾಕುವ ಯತ್ನ ನಡೆಸಿದ್ದಾರೆ. ಅವರಿಗೆ ಪಾದಯಾತ್ರೆಯಲ್ಲಿ ಸುನಾಮಿಯಂತೆ ಜನ ಬಂದು ಉತ್ತರ ಕೊಟ್ಟಿದ್ದಾರೆ. ಯಾರೇ ಆಗಲಿ ಸಮಾಜದ ಕಣ್ಣು ಕೀಳುವ ಕೆಲಸ ಮಾಡಬಾರದು ಎಂದರು.

ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ರೇವಣಸಿದ್ದೇಶ್ವರ ಮಠದ ಶ್ರೀ ರೇವಣಸಿದ್ದೇಶ್ವರ ಶಾಂತ ಸ್ವಾಮೀಜಿ, ಮಂಗಾಪುರದ ಶ್ರೀ ಸೋಮಲಿಂಗೇಶ್ವರ ಸ್ವಾಮೀಜಿ, ಮೈಲಾರದ ಗೊರವಯ್ಯ ರಾಮಪ್ಪ, ಬೆಂಗಳೂರಿನ ರೇವಣಸಿದ್ದೇಶ್ವರ ಮಠದ ಶ್ರೀ ಮುಕ್ತೇಶ್ವರ ಸ್ವಾಮೀಜಿ, ತುರುವಿಹಾಳದ ಅಮೋಘ ರೇವಣಸಿದ್ದೇಶ್ವರ ಮಠ ಶ್ರೀ ಮಾದಯ್ಯ ಸ್ವಾಮೀಜಿ, ಮನಗೂಳಿಯ ರೇವಣಸಿದ್ದೇಶ್ವರ ಮಠದ ಶ್ರೀ ಶರಭಯ್ಯ ಸ್ವಾಮೀಜಿ, ಹೊಸರಿತ್ತಿಯ ಗೋನಾಳ ಮಠದ ಶ್ರೀ ಸಂಗಯ್ಯ ಗುರುವಿನವರು, ಬೆಳ್ಳೂಡಿಯ ಮಹಾದೇವಯ್ಯ ಒಡೆಯರ್, (2ನೇ ಪುಟಕ್ಕೆ)

### ನಾವು ಕಿಂಗ್‌ಮೇಕರ್, ಕಿಂಗ್ ಆಗುವುದಿಲ್ಲ

ನಾವು ಕಿಂಗ್‌ಮೇಕರ್ ಆಗುತ್ತೇವೆಯೇ ಹೊರತು, ಕಿಂಗ್ ಆಗುವುದಿಲ್ಲ ಎಂದಿರುವ ಕಾಗಿನೆಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾಂದಪುರಿ ಸ್ವಾಮೀಜಿ, ತಾವು ರಾಜಕೀಯ ಪ್ರವೇಶಿಸುವ ಸಾಧ್ಯತೆಯೇ ಇಲ್ಲ ಎಂದಿದ್ದಾರೆ.

ಎಸ್.ಟಿ. ಹೋರಾಟ ಆರಂಭಿಸಿದ ಈ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣದಲ್ಲಿ ತಮ್ಮನ್ನು ಶಾಸಕ ಇಲ್ಲವೇ ಸಂಸದರನ್ನಾಗಿ ಮಾಡುವುದಾಗಿ ಹೇಳುವ ವಿಡಿಯೋ ಹರಿದಾಡುತ್ತಿದೆ. ಆದರೆ, ತಾವು ಕಿಂಗ್‌ಮೇಕರ್ ಆಗುತ್ತೇವೆಯೇ ವಿನಃ ಕಿಂಗ್ ಅಲ್ಲ ಎಂದಿದ್ದಾರೆ. ಎಸ್.ಟಿ. ಹೋರಾಟದ ಸಂದರ್ಭದಲ್ಲಿ ಕೆಲವರು ಹಾಲುಮತ ಎಂಬ ಜೇನುಗೂಡಿಗೆ ಕಲ್ಲು ಹೊಡೆದಿದ್ದಾರೆ. ಇದರಿಂದಾಗಿ ಕೆಲ ಜೇನುಗಳು ಹಾರಿ ಹೋಗಿವೆ. ಆದರೆ, ಆ ಜೇನುಗಳೂ ಮುಂದೆ ವಾಪಸ್ ಬರಲಿವೆ. ಸಮಾಜಕ್ಕೆ ಎಸ್.ಟಿ. ಮೀಸಲಾತಿ ಎಂಬ ಜೇನುತುಪ್ಪ ಸಿಗಲಿದೆ ಎಂದು ಶ್ರೀಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### ಸಿದ್ದರಾಮಯ್ಯ ಎಸ್.ಟಿ. ಹೋರಾಟಕ್ಕೆ ಅನ್ಯಾಯ ಮಾಡಬಾರದು : ಈಶ್ವರಪ್ಪ

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಕುರುಬರ ಎಸ್.ಟಿ. ಹೋರಾಟಕ್ಕೆ ಬರಲಿ ಇಲ್ಲವೇ ಸುಮ್ಮನಿರಲಿ. ಆದರೆ, ಈ ಹೋರಾಟಕ್ಕೆ ಆರ್.ಎಸ್.ಎಸ್. ದುಡ್ಡು ಕೊಟ್ಟಿದೆ, ಇದಕ್ಕಾಗಿ ಹೋರಾಟದಲ್ಲಿ ಭಾಗವಹಿಸುವುದಿಲ್ಲ ಎಂದು ಸುಳ್ಳು ಹೇಳುವ ಮೂಲಕ ಸಮಾಜಕ್ಕೆ ಅನ್ಯಾಯ ಮಾಡಬಾರದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಹಾಗೂ ಕುರುಬ ಸಮಾಜದ ನಾಯಕ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಸಮಾಜದವರು ಒಟ್ಟಿಗೆ ಎಸ್.ಟಿ. ನೀಡಬೇಕೆಂದು ಕೇಳಿದರೆ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗೆ ಮೀಸಲಾತಿ ನೀಡುವ ಮನಸ್ಸು ಬರುತ್ತದೆ. ಸಮಾಜದ ದನಿ ಒಡಕಾಗಬಾರದು ಎಂದು ತಿಳಿಸಿದರು.

# ಸ್ವಾಮಿತ್ವ ಯೋಜನೆ ಚುರುಕುಗೊಳಿಸಲು ಸೂಚನೆ

## ಜಿ.ಪಂ.ನಲ್ಲಿನ ದಿಶಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ

ದಾವಣಗೆರೆ, ಜ. 19- ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ವರ್ಷಗಳಿಂದ ತಮ್ಮ ಜಾಗದ ದಾಖಲೆ ಹೊಂದಿರದವರಿಗೆ ಆಧಾರ್ ಕಾರ್ಡ್ ಮಾದರಿಯಲ್ಲಿ ಹಕ್ಕುಪತ್ರ (ಪ್ರಾಪರ್ಟಿ ಕಾರ್ಡ್) ನೀಡುವ ಸ್ವಾಮಿತ್ವ ಯೋಜನೆಯನ್ನು ಚುರುಕುಗೊಳಿಸಿ, ಶೀಘ್ರ ಮುಗಿಸುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಜಿಲ್ಲಾ ಅಭಿವೃದ್ದಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ)ಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆ ಯಡಿ ಮೊದಲ ಹಂತದಲ್ಲಿ ಪ್ರತಿ ತಾಲ್ಲೂಕಿ ನಿಂದ 8 ಗ್ರಾಮ ಪಂಚಾಯ್ತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಇನ್ನೊಂದು ತಿಂಗಳಲ್ಲಿ ಯೋಜನೆಯ ಶಾಶ್ವತ ಆಸ್ತಿ ದಾಖಲೀಕರಣ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ಜಿ.ಪಂ. ಸಿಇಒ ಪದ್ಮಾ ಬಸವಂತಪ್ಪ ಹೇಳಿದರು. (2ನೇ ಪುಟಕ್ಕೆ)

### ಪಾಲಿಕೆ ಆಯುಕ್ತ, ಸ್ಮಾರ್ಟ್ ಎಂಡಿಗೆ ಸಂಸದರ ತರಾಟೆ

ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಹಾಗೂ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಅವರನ್ನು ಸಂಸದ ಜಿ.ಎಂ. ಸಿದ್ದೇಶ್ವರ ತರಾಟೆಗೆ ತೆಗೆದುಕೊಂಡರು.

ಸ್ವಚ್ಛ ಭಾರತ್ ಮಿಷನ್ ಯೋಜನೆ ಯಡಿ ನಗರದಲ್ಲಿ ನಿರ್ಮಿಸಿರುವ ಶೌಚಾಲಯಗಳ ಬಗ್ಗೆ ತಪ್ಪಾಗಿ (2ನೇ ಪುಟಕ್ಕೆ)

### ಶುದ್ಧ ನೀರಿನ ಘಟಕ ರಿಪೇರಿಗೆ ಕರೆ ಮಾಡಿ

**ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸಮಿತಿ ಬಂದು ಜಿಲ್ಲೆಯಲ್ಲಿ ಪರಿಶೀಲನೆ ನಡೆಸಿದೆ.**

**ದುರಸ್ತಿಗೆ ಸಂಬಂಧಿಸಿದಂತೆ 48 ಗಂಟೆಯೊಳಗೆ ದುರಸ್ತಿ ಪಡಿಸಲು ಗುತ್ತಿಗೆದಾರರಿಗೆ, ಸಹಾಯಕ ಕಾರ್ಯ** (2ನೇ ಪುಟಕ್ಕೆ)

ಆಸ್ಟ್ರೇಲಿಯಾ 369 & 294
ಭಾರತ 336 & 329/7

ಹಿರಿಯರ ಗೈರಿನಲ್ಲಿ ವಿಜೃಂಭಿಸಿದ ಕಿರಿಯರು



# ಆಸ್ಟ್ರೇಲಿಯಾ ವಿರುದ್ಧ ಸ್ಮರಣಾರ್ಹ ಜಯ

ಬ್ರಿಸ್ಬೇನ್, ಜ. 19 – ಸಾಲು ಸಾಲು ಗಾಯಗಳು, ಹಿರಿಯ ಆಟಗಾರರ ಅನುಪಸ್ಥಿತಿ ಹಾಗೂ ಬಳಲಿಕೆಯನ್ನು ಮೆಟ್ಟಿ ನಿಂತಿರುವ ಭಾರತೀಯ ಕ್ರಿಕೆಟ್ ತಂಡ, ಆಸ್ಟ್ರೇಲಿಯಾ ವಿರುದ್ಧದ ನಾಲ್ಕನೇ ಹಾಗೂ ಅಂತಿಮ ಟೆಸ್ಟ್ ಅನ್ನು ಮೂರು ವಿಕೆಟ್‌ನಿಂದ ಗೆದ್ದುಕೊಂಡಿದೆ. ಇದರಿಂದಾಗಿ ಸರಣಿಯನ್ನು 2-1ರ ಅಂತರದಿಂದ ಗೆದ್ದಿರುವ ಭಾರತೀಯ ತಂಡ, ಬಾರ್ಡರ್ - ಗಾವಸ್ಕರ್ ಕಪ್ ತನ್ನದಾಗಿಸಿಕೊಂಡಿದೆ.

ರಿಶಭ್ ಪಂತ್ 138 ಎಸೆತಗಳಲ್ಲಿ 89 ರನ್ ಗಳಿಸಿ ಅಜೇಯರಾಗಿ ಉಳಿದಿದ್ದು, ಭಾರತ 328 ರನ್‌ಗಳ ಗುರಿ ತಲುಪಲು ನೆರವಾಯಿತು. ಇದರೊಂದಿಗೆ 32 ವರ್ಷಗಳ ನಂತರ ಆಸ್ಟ್ರೇಲಿಯಾ ಗಬ್ಬಾ ನೆಲದಲ್ಲಿ ಮೊದಲ ಸೋಲು ಕಂಡಿದೆ.

ಭಾರತದ ವಿರುದ್ಧ ಸತತ ಎರಡು ಸರಣಿ ಸೋಲುವುದರೊಂದಿಗೆ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಟಿಮ್ ಪೈನೆ ಅವಧಿಯೂ ಅಂತ್ಯವಾಗುವ ಸಾಧ್ಯತೆ ಇದೆ.

ನೂರು ಟೆಸ್ಟ್‌ಗಳಲ್ಲಿ ಆಡಿರುವ ಆಸ್ಟ್ರೇಲಿಯಾದ ಬೌಲರ್ ನ್ಯಾಥನ್ ಲ್ಯಾನ್ ಅವರನ್ನು ಪಂತ್ ಅವರು ಹೊಸ ಆಟಗಾರ ವಾಷಿಂಗ್ಟನ್ ಸುಂದರ್ (22) ಜೊತೆಗೂಡಿ ಎದುರಿಸಿದ್ದು ಬಹು ದಿನಗಳವರೆಗೆ ನೆನಪಿನಲ್ಲಿ ಉಳಿಯಲಿದೆ.

ಹಲವು ಬಾರಿ ಟೀಕೆಗಳಿಗೆ ಗುರಿಯಾಗಿದ್ದ ಪಂತ್, ವಿದೇಶಿ ನೆಲದಲ್ಲಿ (2ನೇ ಪುಟಕ್ಕೆ)

# ಬೆಳೆಗೆ ಬೆಲೆಯಿಲ್ಲ, ಕಾಯ್ದೆಗಳಿಂದ ನೆಮ್ಮದಿ ಇಲ್ಲ

## ಮೋದಿ ಸರ್ಕಾರದ ಆಡಳಿತದಲ್ಲಿ ಅನ್ನದಾತರು ಅನಾಥ : ಮುನಿಯಪ್ಪ



ದಾವಣಗೆರೆ, ಜ.19 – ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಇದೇ ಮೊದಲ ಬಾರಿಗೆ ರೈತರ ಹೋರಾಟ ಆರಂಭವಾಗಿ ಎರಡು ತಿಂಗಳಾದರೂ ಪರಿಹಾರ ಸಿಗುತ್ತಿಲ್ಲ. ಕೇಂದ್ರದ ನರೇಂದ್ರ ಮೋದಿ ಸರ್ಕಾರದ ಆಡಳಿತ ದಲ್ಲಿ ರೈತರಿಗೆ ರಕ್ಷಣೆಯಿಲ್ಲದಂತಾಗುತ್ತಿದೆ ಎಂದು ಎಐಸಿಸಿ ಸದಸ್ಯ ಹಾಗೂ ಮಾಜಿ ಕೇಂದ್ರ ಸಚಿವ ಕೆ. ಹೆಚ್. ಮುನಿಯಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ರೈತರು ಬೆಳೆದ ಬೆಳೆಗಳಿಗೆ ಬೆಲೆ ಸಿಗುತ್ತಿಲ್ಲ. ಕೃಷಿಗೆ ಮಾರಕವಾಗುವ ಕಾಯ್ದೆಗಳನ್ನು ಜಾರಿಗೆ ತರಲಾಗುತ್ತಿದೆ. ಇದರಿಂದಾಗಿ ದೇಶದ ಬೆನ್ನೆಲುಬಾದ ಅನ್ನದಾತರು ಹಾಗೂ ರೈತ ಕಾರ್ಮಿಕರು ಅನಾಥರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸುತ್ತಿರುವ ರೈತರಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿದೆ. ಇದರ ಅಂಗವಾಗಿ ನಾಳೆ ಬುಧವಾರ (2ನೇ ಪುಟಕ್ಕೆ)

### ಲೈಟ್ ಹಾಕೋ ಯೋಗ್ಯತೆಯೂ ಬಿಜೆಪಿಯವರಿಗಿಲ್ಲ: ಎಸ್ಸೆಸ್ಸೆಂ

ದಾವಣಗೆರೆ, ಜ. 19- ಜಿಲ್ಲೆಗೆ ಬಿಜೆಪಿ ಸರ್ಕಾರ ಇಂದಿಗೂ ಒಂದು ಪೈಸೆ ಬಿಡುಗಡೆ ಮಾಡಿಲ್ಲ, ಪ್ರಸ್ತುತ ಜಿಲ್ಲೆಯಲ್ಲಿ ನಡೆಯುತ್ತಿರುವ ಹಾಗೂ ನಡೆಯಬೇಕಾಗಿರುವ ಅನೇಕ ಅಭಿವೃದ್ಧಿ



ಕಾಮಗಾರಿಗಳು ಹಿಂದಿನ ಕಾಂಗ್ರೆಸ್ ಸರ್ಕಾರ ನೀಡಿದ ಅನುದಾನದಿಂದ ಎಂದು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರಿಗೆ ಬೀದಿ ಲೈಟ್ ಬರ್ನ್ ಆದ್ರೆ, ಹೊಸ ಲೈಟ್ ಹಾಕೋ ಯೋಗ್ಯತೆಯೂ ಇಲ್ಲ. ಅಂತಹದರಲ್ಲಿ ಅನುದಾನ ತರಲು ಸಾಧ್ಯವೇ ? ಎಂದವರು ಪ್ರಶ್ನಿಸಿದರು.

ಕುಂದವಾಡ ಕೆರೆ ಅಭಿವೃದ್ಧಿಗೆ ಹಿಂದಿನ ಕಾಂಗ್ರೆಸ್ ಸರ್ಕಾರದ ರಾಮಲಿಂಗಾರೆಡ್ಡಿ ಅವರು ಸಚಿವರಾಗಿದ್ದ ವೇಳೆ ಅನುದಾನ ನೀಡಿದ್ದರು. ಆದರೆ ತಾಂತ್ರಿಕ ಕಾರಣಗಳಿಂದ (2ನೇ ಪುಟಕ್ಕೆ)

# ಅ.4ರಿಂದ ಪದವಿ ತರಗತಿ ಆರಂಭ


## ಡಿಸಿಎಂ ಅಶ್ವತ್ಥನಾರಾಯಣ

ಬೆಂಗಳೂರು, ಜ.19- 2021-22ನೇ ಸಾಲಿನ ಶೈಕ್ಷಣಿಕ ವರ್ಷದ ಕ್ಯಾಲೆಂಡರನ್ನು ಉನ್ನತ ಶಿಕ್ಷಣ ಇಲಾಖೆ ಸಿದ್ಧಪಡಿಸಿದ್ದು, ಎಂಜಿನಿಯರಿಂಗ್, ಪದವಿ ಮತ್ತು ಸ್ನಾತಕೋತ್ತರ ತರಗತಿಗಳು 2021ರ ಅಕ್ಟೋಬರ್ 4ರಿಂದ ಆರಂಭವಾಗಲಿವೆ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಈ ಬಗ್ಗೆ ಮಂಗಳವಾರ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕೋವಿಡ್ ಕಾರಣದಿಂದ 2021-22ನೇ ಸಾಲಿನ ಶೈಕ್ಷಣಿಕ (5ನೇ ಪುಟಕ್ಕೆ)

# ಪಂಚಮಸಾಲಿಗೆ ಸೌಲಭ್ಯಕ್ಕಾಗಿ ಜಯಮೃತ್ಯುಂಜಯ ಶ್ರೀ ಹೋರಾಟ

### ಹರಿಹರದಲ್ಲಿ ಪಾದಯಾತ್ರೆ ಸ್ವಾಗತಿಸುವ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್



ಹರಿಹರ, ಜ19- ಕೂಡಲಸಂಗಮದ ಪಂಚಮಸಾಲಿ ಸಮಾಜದ ಗುರುಪೀಠಾಧ್ಯಕ್ಷ ಶ್ರೀ ಜಯ ಮೃತ್ಯುಂಜಯ ಮಹಾಸ್ವಾಮೀಜಿ ಹಮ್ಮಿಕೊಂಡಿರುವ ಪಾದಯಾತ್ರೆ ಪಂಚಮಸಾಲಿ ಸಮಾಜದವರ ಭವಿಷ್ಯ ಬದಲಾಯಿಸುವ ಹಾಗೂ ಸಮಾಜದ ಸಂಘಟನೆಯ ದೃಷ್ಟಿಯಿಂದ ಕೂಡಿದೆ ಎಂದು ಮಾಜಿ ಶಾಸಕರೂ ಆಗಿರುವ ಪಂಚಮಸಾಲಿ ಸಮಾಜದ ಮುಖಂಡ ಹೆಚ್. ಎಸ್. ಶಿವಶಂಕರ್ ಹೇಳಿದರು.

ಇದೇ ದಿನಾಂಕ 29 ರಂದು ನಗರಕ್ಕೆ ಆಗಮಿಸಲಿರುವ ಶ್ರೀ ಜಯಮೃತ್ಯುಂಜಯ ಮಹಾಸ್ವಾಮೀಜಿ ಪಂಚ ಲಕ್ಷ ಪಾದಯಾತ್ರೆ ಸ್ವಾಗತಿಸುವ ಹಿನ್ನೆಲೆಯಲ್ಲಿ ನಗರದ ಶ್ರೀ ರಾಘವೇಂದ್ರ ಸ್ವಾಮಿ ಕಲ್ಯಾಣ ಮಂಟಪದ ಆವರಣದಲ್ಲಿ ಇಂದು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮನುಷ್ಯನಾಗಿ ಹುಟ್ಟಿದ (5ನೇ ಪುಟಕ್ಕೆ)

# ಅಲರ್ಜಿ ಇದ್ದರೆ ಲಸಿಕೆ ಬೇಡ

## ಕೊವಿಶೀಲ್ಡ್ ಉತ್ಪಾದಕ ಸೆರಮ್ ಸೂಚನೆ

ನವದೆಹಲಿ, ಜ. 19 – ತೀವ್ರ ಅಲರ್ಜಿ ಇರುವವರು ಕೊವಿಶೀಲ್ಡ್ ಲಸಿಕೆ ಪಡೆಯಬಾರದು ಎಂದು ಲಸಿಕೆ ಉತ್ಪಾದಿ ಸುವ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಿಳಿಸಿದೆ.

ಲಸಿಕೆ ಪಡೆಯುವ ಕುರಿತು ವಿವರಣೆಗಳನ್ನು ಬಿಡುಗಡೆ ಮಾಡಿರುವ ಸೆರಮ್, ಲಸಿಕೆಯಲ್ಲಿರುವ ಯಾವುದೇ ಅಂಶದ ಬಗ್ಗೆ ಅಲರ್ಜಿ ಇದ್ದರೆ ಅದನ್ನು ಪಡೆಯಬಾರದು ಎಂದು (2ನೇ ಪುಟಕ್ಕೆ)


## ಸವಿನೆನಪು



ದಿ|| ಶ್ರೀ ಕಣಕುಪ್ಪಿ ಜವಳಿ ಹಾಲಪ್ಪ ಮಾಸ್ಟರ್

*ನೀವು ನಮ್ಮನ್ನಗಲಿ ಇಂದಿಗೆ (20.01.2021) 12 ವರ್ಷಗಳಾದವು. ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ಸ್ಮರಣೆಯೇ ನಮಗೆ ದಾರಿ ದೀಪ.*

ಸದಾ ನಿಮ್ಮ ನೆನಪಿನಲ್ಲಿರುವ,
ಶ್ರೀಮತಿ ಬಸಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು, ಕಣಕುಪ್ಪಿ ಟ್ರೇಡಿಂಗ್ ಕಂ.,
ಚಾಮರಾಜಪೇಟೆ,
ಶ್ರೀ ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್
ನರಸರಾಜ ರಸ್ತೆ, ದಾವಣಗೆರೆ.

# ಐದು ವರ್ಷಗಳಲ್ಲಿ 20 ಲಕ್ಷ ಹುದ್ದೆ ಸೃಷ್ಟಿ

## 5 ಲಕ್ಷ ಕೋಟಿ ರೂ. ಕೈಗಾರಿಕಾ ಬಂಡವಾಳದ ಗುರಿ

ಬೆಂಗಳೂರು, ಜ.19 - ಮುಂದಿನ ಐದು ವರ್ಷದೊಳಗೆ ರಾಜ್ಯದಲ್ಲಿ 20 ಲಕ್ಷ ಉದ್ಯೋಗ ಸೃಷ್ಟಿ ಹಾಗೂ 5 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಗುರಿಯೊಂದಿಗೆ ಕೈಗಾರಿಕೆಗಳ ಸ್ಥಾಪನೆ ಮಾಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಜಗದೀಶ್ ಶೆಟ್ಟರ್ ತಿಳಿಸಿದ್ದಾರೆ.

ಸಮಾರಂಭವೊಂದರಲ್ಲಿ ಮಾತನಾಡಿದ ಅವರು, ಬೆಂಗಳೂರು ಬದಲಿಗೆ ರಾಜ್ಯದ ಎರಡು ಹಾಗೂ ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಉತ್ತೇಜನ, ಕನ್ನಡಿಗರಿಗೆ ಶೇ.100ರಷ್ಟು ಉದ್ಯೋಗ ಸೇರಿದಂತೆ, ಹಲವು ಅಂಶಗಳನ್ನು ಒಳಗೊಂಡ 2020-2025ನೇ ಸಾಲಿನ ಕರ್ನಾಟಕ ಕೈಗಾರಿಕಾ ನೀತಿ ಜಾರಿಗೆ ಬಂದಿದೆ ಎಂದರು.

ಹೊಸ ಕೈಗಾರಿಕಾ ಬಂಡವಾಳ ಹೂಡಿಕೆ ಯೋಜನೆಗಳು ಒಟ್ಟಾರೆ ಆಧಾರದ ಮೇಲೆ ಕನ್ನಡಿಗರಿಗೆ ಕನಿಷ್ಠ ಶೇ.70 ಮತ್ತು ಶೇ.100ರಷ್ಟು ಮತ್ತು ಗ್ರೂಪ್ 'ಸಿ' ಮತ್ತು 'ಡಿ'ಯಲ್ಲಿ ಶೇ.100ರಷ್ಟು ಕನ್ನಡಿಗರಿಗೆ ಉದ್ಯೋಗ ಒದಗಿಸುವುದು ಕಡ್ಡಾಯವಾಗಿದೆ ಎಂದರು.



ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಿದ್ದು, ಜೋನ್-1 ಹಾಗೂ ಜೋನ್-2 ಕೈಗಾರಿಕಾ ಅಭಿವೃದ್ಧಿಯಲ್ಲಿ ಹಿಂದುಳಿದ ಜಿಲ್ಲೆಗಳು ಸೇರಿರುತ್ತವೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳನ್ನು ಜೋನ್-3ರಲ್ಲಿ ವರ್ಗೀಕರಿಸಲಾಗಿದೆ.

ಬೆಂಗಳೂರು ಮಾತ್ರವಲ್ಲದೇ ಶಿವಮೊಗ್ಗ, ಹುಬ್ಬಳಿ-ಧಾರವಾಡ, ಕಲಬುರಗಿ ಸೇರಿದಂತೆ ರಾಜ್ಯದ ಇತರೆಡೆಯೂ ಹೂಡಿಕೆಗೆ ಕೈಗಾರಿಕೋದ್ಯಮಗಳ ಮನವೊಲಿಸುವ ಪ್ರಯತ್ನ ನಡೆದಿದೆ. ಈ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪಿಸಿದರೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸುವ ಭರವಸೆಯನ್ನು ನೀಡಲಾಗಿದೆ.

ಉತ್ಪಾದನಾ ಕ್ಷೇತ್ರದಲ್ಲಿ ಕರ್ನಾಟಕದ ಸ್ಥಾನವನ್ನು ಮೇಲುಸ್ತರದಲ್ಲಿ ಭದ್ರಪಡಿಸುವ ಜತೆಗೆ ಇನ್ನೂ ಉನ್ನತ ಸಾಧನೆ ಮೂಲಕ ವಾರ್ಷಿಕ ಶೇ.10ರಷ್ಟು ಕೈಗಾರಿಕಾ ಬೆಳವಣಿಗೆ ದರವನ್ನು ಕಾಯ್ದುಕೊಳ್ಳುವುದು ಹೊಸ ಕೈಗಾರಿಕಾ ನೀತಿಯ ಪ್ರಮುಖ ಧ್ಯೇಯವಾಗಿದೆ ಎಂದರು.

ಕರ್ನಾಟಕವನ್ನು ವಿಶ್ವದರ್ಜೆಯ ಔದ್ಯಮಿಕ ಜಾಲವಾಗಿ ಅಭಿವೃದ್ಧಿ ಪಡಿಸಲು ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಭಾಗವಾಗಿ ತುಮಕೂರಿನಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ 1,701.81 ಕೋಟಿ ರೂ. ಮೀಸಲಿರಿಸಿದ್ದು, ಇದರಿಂದ ಅಂದಾಜು 88,500 ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ ಎಂದರು.

## ಕ್ರಿಯಾಶೀಲ ಶಾಸಕರಿಗೆ ಪ್ರಶಸ್ತಿ : ಕಾಗೇರಿ

ಬೆಂಗಳೂರು, ಜ.19 - ವಿಧಾನಮಂಡಲ ಕಲಾಪದಲ್ಲಿ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಸಕಾರದ ಕಣ್ಣು ತೆರೆಸುವಂತಹ ಕ್ರಿಯಾಶೀಲ ಶಾಸಕರೊಬ್ಬರಿಗೆ ವಾರ್ಷಿಕ ಪ್ರಶಸ್ತಿ ನೀಡಲು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹಗಡೆ ಕಾಗೇರಿ ಸಮಿತಿಯೊಂದನ್ನು ರಚಿಸಿದ್ದಾರೆ.

ಸಮಿತಿಯಲ್ಲಿ ಉಪಸಭಾಧ್ಯಕ್ಷರು, ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಸಭಾಧ್ಯಕ್ಷರು ನಾಮನಿರ್ದೇಶನ ಮಾಡುವ ಒಬ್ಬರು ಸದಸ್ಯರಾಗಿರುತ್ತಾರೆ. ಸಮಿತಿಯ ಶಿಫಾರಸ್ಸಿನ ಮೇಲೆ ಪ್ರಶಸ್ತಿಗೆ ಆಯ್ಕೆಯಾದ ಶಾಸಕರ ಒಪ್ಪಿಗೆಯನ್ನು ಪಡೆಯಬೇಕು. ಒಬ್ಬ ಶಾಸಕರಿಗೆ ಜೀವಮಾನದಲ್ಲಿ ಒಮ್ಮೆ ಮಾತ್ರ ಪ್ರಶಸ್ತಿ ನೀಡಲಾಗುತ್ತದೆ.

ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ಸಂಸದೀಯ ಪದಾಧಿಕಾರಿಗಳು, ಸಚಿವರು, ಸಂಸದೀಯ ಕಾರ್ಯದರ್ಶಿಗಳನ್ನು ಪರಿಗಣಿಸಲಾಗುವುದಿಲ್ಲ. ಪ್ರಶಸ್ತಿಯು ವಿಧಾನಸೌಧದ ಕಟ್ಟಡದ ಮುದ್ರೆಯುಳ್ಳ ಬೆಳ್ಳಿ ಪದಕ ಹಾಗೂ ಸಭಾಧ್ಯಕ್ಷರ ಸಹಿ ಒಳಗೊಂಡಿರುತ್ತದೆ.

ವಿಧಾನಸಭಾ ಸದಸ್ಯರು ಸಾರ್ವಜನಿಕ ಜೀವನದಲ್ಲಿ ಶಾಸಕರಾಗಿ ಮತ ಕ್ಷೇತ್ರಕ್ಕೆ ನೀಡಿರುವ ಕೊಡುಗೆ, ಕ್ಷೇತ್ರದಲ್ಲಿ ಗಳಿಸಿರುವ ಅನುಭವ, ಸದನದ ಚರ್ಚೆಗಳಲ್ಲಿ ತೋರಿಸುವ ಕೌಶಲ್ಯ.

ಸಾರ್ವಜನಿಕ ಹಿತಾಸಕ್ತಿಗಳ ಬಗ್ಗೆ ಇರುವ ಆಸಕ್ತಿ, ಸದನದಲ್ಲಿ ಪ್ರಸ್ತಾಪಿಸುವ ವಿಷಯ ಮತ್ತು ಅದರ ಗಂಭೀರತೆ, ಸದನದಲ್ಲಿ ವಿಷಯಗಳನ್ನು ಪ್ರಸ್ತುತಪಡಿಸುವ ವಿಧಾನ, (4ನೇ ಪುಟಕ್ಕೆ)

## ದೈನಂದಿನ ಕೊರೊನಾ ಏಳು ತಿಂಗಳಲ್ಲೇ ಕಡಿಮೆ

ನವದೆಹಲಿ, ಜ. 19 – ಏಳು ತಿಂಗಳ ನಂತರ ಕೊರೊನಾ ವೈರಸ್ ದೈನಂದಿನ ಸೋಂಕಿನ ಪ್ರಮಾಣ ಅತಿ ಕಡಿಮೆ 10,064ರ ಹಂತಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಮಂಗಳವಾರದಂದು ಕೊರೊನಾದಿಂದ 137 ಜನರು ಸಾವನ್ನಪ್ಪಿದ್ದಾರೆ. ಇದು ಎಂಟು ತಿಂಗಳಲ್ಲೇ ಅತಿ ಕಡಿಮೆ ಸಾವಿನ ಪ್ರಮಾಣವಾಗಿದೆ. ಇದುವರೆಗೂ 1.02 ಕೋಟಿ ಜನರು ಕೊರೊನಾ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಸೋಂಕಿತರ ಸಂಖ್ಯೆ ಈಗ ಎರಡು ಲಕ್ಷದಷ್ಟಿದೆ.

# ಖಾತೆ ಹಂಚಿಕೆ ಬಿಕ್ಕಟ್ಟು

## ಪ್ರಮುಖ ಖಾತೆಗಳಿಗೆ ಹಿರಿಯ ಸಚಿವರ ಪಟ್ಟು

ಬೆಂಗಳೂರು, ಜ.19 - ಪ್ರಮುಖ ಐದು ಖಾತೆಗಳಿಗೆ ಹಿರಿಯ ಸಚಿವರು ಪಟ್ಟು ಹಿಡಿದಿರುವುದರಿಂದ ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡುವಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಳೆದ ನಾಲ್ಕು ದಿನಗಳಿಂದ ಕಸರತ್ತು ನಡೆಸಿದರೂ ಸಾಧ್ಯವಾಗುತ್ತಿಲ್ಲ.

ಈ ಮಧ್ಯೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಇತ್ತೀಚೆಗೆ ನಡೆಸಿದ ಕೋರ್ ಕಮಿಟಿ ಸಭೆಯಲ್ಲಿ ಜನರನ್ನು ತಲುಪಬಹುದಾದಂತಹ ಜಲಸಂಪನ್ಮೂಲ, ಕೃಷಿ, ಕಂದಾಯ, ಇಂಧನ, ಗೃಹ, ಪಂಚಾಯತ್ ರಾಜ್, ಶಿಕ್ಷಣ, ಐಟಿ-ಬಿಟಿ, ಆರೋಗ್ಯ ಮತ್ತು ಲೋಕೋಪಯೋಗಿ ಇಲಾಖೆಗಳನ್ನು ಸಕ್ರಿಯವಾಗಿರುವವರು ಮತ್ತು ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡುವವರಿಗೆ ನೀಡುವಂತೆ ಮುಖ್ಯಮಂತ್ರಿ ಅವರಿಗೆ ಸಲಹೆ ಮಾಡಿದ್ದರು.

ಖಾತೆ ನೀಡುವುದಷ್ಟೇ ನಿಮ್ಮ ಹೊಣೆಗಾರಿಕೆ ಅಲ್ಲ, ಅವರು ಇದನ್ನು ಹೇಗೆ ನಿರ್ವಹಣೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆಯೂ ಕಾಲಾನುಕಾಲಕ್ಕೆ ಪರಿಶೀಲನೆ ಮಾಡಬೇಕು.

ಈ ಇಲಾಖೆಗಳು ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳೇ ನಮ್ಮ ಮುಂದಿನ ಚುನಾವಣೆಗೆ ಬುನಾದಿ, ಮುಂದಿನ ಎರಡು ವರ್ಷಗಳಿಗೆ ಪ್ರತಿ ವರ್ಷ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕೈಗೊಳ್ಳಲು ತಲಾ 50 ಸಾವಿರ ಕೋಟಿ ರೂ. ಬಿಡುಗಡೆ ಮಾಡಿಸುತ್ತೇವೆ.

ಕಾರ್ಯಕ್ರಮಗಳು ಜನರಿಗೆ ತಲುಪಬೇಕು, ಇದರಿಂದ ಪಕ್ಷ ಮತ್ತು ಸರ್ಕಾರಕ್ಕೆ ಹೆಸರು ಬರಬೇಕು, ಈ ಹಿನ್ನೆಲೆಯಲ್ಲಿ ಕೆಲವು ಮಾನದಂಡಗಳನ್ನು ಇಟ್ಟುಕೊಂಡು ಖಾತೆ ಹಂಚಿಕೆ ಮಾಡಿ ಎಂದಿದ್ದಾರೆ.

ಈ ಮಧ್ಯೆ, ಗೃಹ ಇಲಾಖೆ ಹೊಣೆಗಾರಿಕೆಯಿಂದ ತಮ್ಮನ್ನು ಮುಕ್ತಗೊಳಿಸಿ ಎಂದಿರುವ ಬಸವರಾಜ್ ಬೊಮ್ಮಾಯಿ, ತಮಗೆ ಜಲಸಂಪನ್ಮೂಲ ಇಲಾಖೆ ಹೊಣೆಗಾರಿಕೆ ನೀಡಿದರೆ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಗೌರವ ತರುತ್ತೇನೆ ಎಂದು ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಗೃಹ ಖಾತೆ ಯಾರಿಗೆ ನೀಡಬೇಕೆಂಬುದೇ ಮುಖ್ಯಮಂತ್ರಿ ಅವರಿಗೆ ತಲೆನೋವಾಗಿದೆ, ಈ ಖಾತೆ ವಹಿಸಿಕೊಳ್ಳಲು ಯಾರೂ ಮುಂದೆ ಬರುತ್ತಿಲ್ಲ. ಸಂಪುಟದಲ್ಲಿರುವ ಹಿರಿಯ ಸಚಿವರಿಗೆ ಕೈಗಾರಿಕೆ, ಇಂಧನ, ಲೋಕೋಪಯೋಗಿ, ಜಲಸಂಪನ್ಮೂಲ, ಕಂದಾಯ ಇಲಾಖೆಗಳ ಮೇಲೇ ಕಣ್ಣು.

ಹೊಸದಾಗಿ ಸಂಪುಟ ಸೇರ್ಪಡೆಗೊಂಡವರಲ್ಲಿ ಮೂರು ಮಂದಿ ಇಲಾಖೆಗಳನ್ನು ಪಡೆಯಲು ದೆಹಲಿ ಮೂಲಕ ಲಾಬಿ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಅವರು ನಾಲ್ಕು ದಿನಗಳ ಕಾಲ ಪ್ರವಾಸದಲ್ಲಿದ್ದುದರಿಂದ ಹೆಚ್ಚಿನ ಗಮನ (4ನೇ ಪುಟಕ್ಕೆ)

## ಸಂಪುಟದಿಂದ ಯೋಗೇಶ್ವರ್ ಕೈ ಬಿಡಲು ಬಿಜೆಪಿ ನಿಷ್ಠರ ಆಗ್ರಹ

ಬೆಂಗಳೂರು, ಜ.19 - ಕಳೆದ ಒಂದು ವಾರದ ಹಿಂದೆ ಮಂತ್ರಿಮಂಡಲ ಸೇರಿದ ಸಿ.ಪಿ. ಯೋಗೇಶ್ವರ್ ಅವರನ್ನು ಸಂಪುಟದಿಂದ ಕೈಬಿಡಬೇಕೆಂದು ಬಿಜೆಪಿಯ ನಿಷ್ಠಾವಂತ ಶಾಸಕರು ದೆಹಲಿ ವರಿಷ್ಠರ ಮೊರೆ ಹೋಗಿದ್ದಾರೆ.

ಇವರುಗಳ ವಜಾಕ್ಕೆ ಮನವಿ ಮಾಡುತ್ತಿರುವುದಷ್ಟೇ ಅಲ್ಲದೆ, ಇವರ ವಿರುದ್ಧ ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ದೆಹಲಿಗೆ ತೆಗೆದುಕೊಂಡು ಹೋಗಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ಈ ದಾಖಲೆಗಳ ಕಡತವನ್ನು ನಿಷ್ಠಾವಂತ ಬಿಜೆಪಿ ಶಾಸಕರ ಕೈಗೆ ತಲುಪಿಸಿ, ವರಿಷ್ಠರಿಗೆ ತಲುಪುವಂತೆ ಮಾಡಿದ್ದಾರೆ.

ಪಕ್ಷದ ಸಮಾನ ಮನಸ್ಕ ಶಾಸಕರ ಸಭೆ ನಡೆಸುವುದಾಗಿ ನಿನ್ನೆಯಷ್ಟೇ ಹೇಳಿದ್ದ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ತಡ ರಾತ್ರಿ ದೆಹಲಿಗೆ ಕೆಲವು ಶಾಸಕರ ಜೊತೆ ದೌಡಾಯಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ದೆಹಲಿಯಲ್ಲಿಂದು ರಾಜ್ಯ ಪಕ್ಷ ಉಸ್ತುವಾರಿ ಅರುಣ ಸಿಂಗ್ ಸೇರಿದಂತೆ ಕೆಲವು ವರಿಷ್ಠ ನಾಯಕರುಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿರುವುದಲ್ಲದೆ, ಯೋಗೇಶ್ವರ್ ವಿರುದ್ಧ ದೂರಿತ್ತಿದ್ದಾರೆ.

ಅವರ ವಿರುದ್ಧದ ಭ್ರಷ್ಟಾಚಾರ ಆರೋಪದ ಕಡತಗಳನ್ನು ನೀಡಿ ಅವರನ್ನು ಮಂತ್ರಿಮಂಡಲದಿಂದ ಕೈಬಿಡುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸೂಚಿಸುವಂತೆ ಮನವಿ ಮಾಡಿದ್ದಾರೆ.

ನಾವು ನಾಯಕತ್ವದ ಬಗ್ಗೆ ಎಲ್ಲಿಯೂ ಪ್ರಶ್ನಿಸಿಲ್ಲ, ಯಡಿಯೂರಪ್ಪ ಮಾರ್ಗದರ್ಶನದಲ್ಲೇ ನಾವು ಹೋಗುತ್ತೇವೆ, ಆದರೆ ಚುನಾವಣೆಯಲ್ಲಿ ಸೋತವರಿಗೆ ಅದರಲ್ಲೂ ಭ್ರಷ್ಟರಿಗೆ ಅಧಿಕಾರ ನೀಡಿರುವುದು ಎಷ್ಟು ಸಮಂಜಸ? ಎಂದು ಪ್ರಶ್ನಿಸಿದ್ದಾರೆ.

ಸಂಪುಟದಲ್ಲಿ ಕೆಲವರು ಅಸಮರ್ಥರೂ ಇದ್ದಾರೆ, ಅಂತಹವರನ್ನು ಹೊರಗಿಡಿ, ಪಕ್ಷಕ್ಕೆ ದುಡಿದವರಿಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದ್ದಾರೆ. (4ನೇ ಪುಟಕ್ಕೆ)

# ಮಹಾರಾಷ್ಟ್ರ ಮುಖ್ಯಮಂತ್ರಿ ಠಾಕ್ರೆ ಪ್ರತಿಕೃತಿ ದಹಿಸಿ ಆಕ್ರೋಶ






ದಾವಣಗೆರೆ, ಜ.19- ಕರ್ನಾಟಕದ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಲಾಗುವುದು ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿಕೆಗೆ ಭಾರೀ ವಿರೋಧ ವ್ಯಕ್ತವಾಗಿ ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಇಂದು ಕನ್ನಡಪರ ಸಂಘಟನೆಗಳು ಠಾಕ್ರೆ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದವು.

**ಕರುನಾಡ ಕನ್ನಡ ಸೇನೆ ರಾಜ್ಯ ಘಟಕದ ಪ್ರತಿಭಟನೆ:** ಭಾರತದಲ್ಲಿ ಭಾಷಾವಾರು ಪ್ರಾಂತ್ಯ ವಿಂಗಡಣೆಯಾದಾಗ (ಮಹಾಜನ್ ವರದಿ) ಆಯಾ ಭಾಷಿಗರು ಅವರ ಹಿಡಿತದಲ್ಲಿರುವ ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಿಸಿರುವುದನ್ನು ಅರಿಯಬೇಕಾದ ಉದ್ಧವ್ ಠಾಕ್ರೆ, ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುವುದಾಗಿ ಬಾಲಿಶ ಹೇಳಿಕೆ ನೀಡಿರುವುದು ಖಂಡನೀಯ ಎಂದು ಕರುನಾಡ ಕನ್ನಡ ಸೇನೆ ಅಧ್ಯಕ್ಷ ಕೆ.ಟಿ. ಗೋಪಾಲಗೌಡರು ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡಿಗರು ಕರ್ನಾಟಕದ ಒಂದು ಇಂಚು ಜಾಗವನ್ನೂ ಮಹಾರಾಷ್ಟ್ರಕ್ಕೆ ಕೊಡಲು ಸಿದ್ಧರಿಲ್ಲ. ರಕ್ತವನ್ನು ಕೊಡುತ್ತೇವೆಯೇ ಹೊರತು ಕರ್ನಾಟಕದ ಜಾಗವನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡುವುದಿಲ್ಲ. ಈ ವಿಚಾರವಾಗಿ ಕೂಡಲೇ ರಾಜ್ಯದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸೇನೆಯ ರಾಜ್ಯ ಉಪಾಧ್ಯಕ್ಷ ಶಿವರಾಜ್ ಸಾಹುಕಾರ್, ಕಾರ್ಯಾಧ್ಯಕ್ಷ ಎನ್. ರಾಜೇಂದ್ರ ಬಂಗೇರ, ಜಿಲ್ಲಾಧ್ಯಕ್ಷ ಡಿ. ಶಿವಪುತ್ರ, ಮುಖಂಡರಾದ ತಿಪ್ಪೇಶ್, ಮಲ್ಲೇಶ್, ಅವಿನಾಶ್, ದರ್ಶನ್, ಬಸವರಾಜ್, ಶಿವಕುಮಾರ್, ಆನಂದ, ಸಚಿನ್, ನಾಗರಾಜ, ಮಧುಸೂದನ್, ಗಿರೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

> **"ಕರ್ನಾಟಕದ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಲಾಗುವುದು ಎಂಬ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ದವ್ ಠಾಕ್ರೆ ಹೇಳಿಕೆಗೆ ನಗರದಲ್ಲಿ ಭಾರೀ ವಿರೋಧ**

**ಠಾಕ್ರೆ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿ:** ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಿ, ನಂತರ ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮುಖಾಂತರ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಕೇವಲ ಮರಾಠಿ ಭಾಷಿಕರು ಅಧಿಕವಾಗಿದ್ದಾರೆಂಬ ನೆಪವನ್ನು ಮುಂದಿಟ್ಟುಕೊಂಡು ಕಳೆದ ಐದು ದಶಕಗಳಿಂದ ಮಹಾರಾಷ್ಟ್ರದ ರಾಜಕಾರಣಿಗಳು ಪದೇ ಪದೇ ಬೆಳಗಾವಿ ನಮ್ಮದು ಎಂದು ಹೇಳಿಕೆಗಳನ್ನು ನೀಡುತ್ತಾ, ಕರ್ನಾಟಕದಲ್ಲಿನ ಮರಾಠಿಗರು ಹಾಗೂ ಕನ್ನಡಿಗರ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಕೆ.ಜಿ. ಯಲ್ಲಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕದ ಅನೇಕ ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಟ್ಟಾಗಿದೆ. ಆದರೂ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮಹಾರಾಷ್ಟ್ರದ ರಾಜಕಾರಣಿಗಳು ಕನ್ನಡಿಗರನ್ನು ಕೆಣಕುತ್ತಿದ್ದಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ವಿಚಾರ ಈಗ ಉಚ್ಚ ನ್ಯಾಯಾಲಯದಲ್ಲಿದ್ದು, ಮಹಾರಾಷ್ಟ್ರದ ಮುಖ್ಯಮಂತ್ರಿ ಹೇಳಿಕೆ ನ್ಯಾಯಾಂಗ ನಿಂದನೆಯಾಗಲಿದೆ. ಆದ್ದರಿಂದ ಕೂಡಲೇ ನ್ಯಾಯಾಲಯದಲ್ಲಿ ಉದ್ಧವ್ ಠಾಕ್ರೆ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸುವಂತೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ಅಧ್ಯಕ್ಷ ಎನ್.ಹೆಚ್. ಹಾಲೇಶ್, ಕಾರ್ಯಾಧ್ಯಕ್ಷ ವಿ. ಅವಿನಾಶ್, ಮಾಲಾ, ಅಮ್ಜದ್ ಆಲಿ, ಸಂತೋಷ್ ದೊಡ್ಡಮನಿ, ಎಂ. ರವಿ, ಬಸವರಾಜ, ರಾಜು, ದೇವೇಂದ್ರಪ್ಪ, ಭೋಜರಾಜ್, ಶಾಂತಮ್ಮ, ಈರಣ್ಣ, ರಘು, ಕವಿತ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ವಾಟ್ಸ್‌ಅಪ್ ಹೊಸ ಷರತ್ತು ಕೈ ಬಿಡಲು ಕೇಂದ್ರ ತಾಕೀತು

ನವದೆಹಲಿ, ಜ. 19 – ವಾಟ್ಸ್‌ಅಪ್ ತನ್ನ ಇತ್ತೀಚಿನ ಖಾಸಗಿತನದ ಷರತ್ತುಗಳನ್ನು ವಾಪಸ್ ಪಡೆಯಬೇಕೆಂದು ಭಾರತ ಸರ್ಕಾರ ತಿಳಿಸಿದ್ದು, ಏಕಪಕ್ಷೀಯವಾಗಿ ಬದಲಾವಣೆ ತರುವುದು ಅನುಚಿತ ಹಾಗೂ ಒಪ್ಪಲಾಗದು ಎಂದು ತಿಳಿಸಿದೆ.

ವಾಟ್ಸ್‌ಅಪ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಲ್ ಕ್ಯಾತ್‌ಕಾರ್ಟ್ ಅವರಿಗೆ ಕಠಿಣ ಪದಗಳ ಪತ್ರ ಬರೆದಿರುವ ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ, ಜನರು ಆಯ್ಕೆಯಿಂದ ಹೊರ ಬರಲು ಅವ ಕಾಶ ನೀಡದೇ ಹೊಸ ಷರತ್ತು ವಿಧಿಸಿರುವುದು ಭಾರತೀಯ ನಾಗರಿಕರ ಆಯ್ಕೆ ಹಾಗೂ ಸ್ವಾಯತತ್ತೆಯ (4ನೇ ಪುಟಕ್ಕೆ)


## ಸಿಎಂ ಸ್ಥಾನ ಕಳೆದುಕೊಂಡ ಮೇಲೆ ಸಿದ್ಧರಾಮಯ್ಯ ಹುಚ್ಚರಾಗಿದ್ದಾರೆ

**ಈಶ್ವರಪ್ಪ**

ದಾವಣಗೆರೆ, ಜ. 19- ಮುಖ್ಯಮಂತ್ರಿ ಸ್ಥಾನ ಕಳೆದು ಕೊಂಡ ಮೇಲೆ ಸಿದ್ದರಾಮಯ್ಯ ಅವರು ಒಂದು ರೀತಿ ಹುಚ್ಚರಾಗಿದ್ದಾರೆ. ಅದಕ್ಕಾಗಿಯೇ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಈಶ್ವರಪ್ಪ ಮುಖ್ಯಮಂತ್ರಿಯಾಗಲು ಕುರುಬರ ಎಸ್.ಟಿ ಹೋರಾಟಕ್ಕೆ ಬೆಂಬಲಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಒಬ್ಬ ಮುಖ್ಯಮಂತ್ರಿ ಆಗಿದ್ದವರಿಂದ ಈ ರೀತಿಯ ಹೇಳಿಕೆ ಉಚಿತವಲ್ಲ. ನಾನು ಮುಖ್ಯಮಂತ್ರಿಯಾಗುವುದನ್ನು ಬಿಜೆಪಿ ಪಕ್ಷ ನಿರ್ಧಾರ (4ನೇ ಪುಟಕ್ಕೆ)

# ಹರಪನಹಳ್ಳಿ : ದೇವದಾಸಿ ಮಹಿಳೆಯರ ವಿಮೋಚನಾ ಸಂಘದಿಂದ ಪ್ರತಿಭಟನೆ



ಹರಪನಹಳ್ಳಿ, ಜ.19 - ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ತಾಲ್ಲೂಕು ಘಟಕದ ಆಶ್ರಯದಲ್ಲಿ ದೇವದಾಸಿಯರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತರಲು ಯತ್ನಿಸುತ್ತಿರುವ ಕಾರ್ಪೊರೇಟ್ ಕಂಪನಿಗಳ ಪರವಾದ ಕಾಯ್ದೆಗಳು, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ, ರಾಜ್ಯ ಸರ್ಕಾರದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಗೋಹತ್ಯೆ ನಿಷೇಧ ಕಾಯ್ದೆಗಳನ್ನು ವಾಪಸ್ ಪಡೆಯಬೇಕು.

ದೇವದಾಸಿ ಮಹಿಳೆಯರಿಗೆ ನೀಡುವ ಮಾಸಿಕ ಸಹಾಯಧನವನ್ನು ಈ ಬಜೆಟ್ ನಲ್ಲಿ ಕನಿಷ್ಠ 3 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು, ಅದೇ ರೀತಿ ನೆರವು ನೀಡಲಿರುವ ಮಹಿಳೆಯರ ವಯೋಮಿತಿ ಷರತ್ತನ್ನು ತೆಗೆದು ಹಾಕಬೇಕು.

> **"ಗಣತಿ ಪಟ್ಟಿಯಿಂದ ಬಿಟ್ಟು ಹೋದ ದೇವದಾಸಿ ಮಹಿಳೆಯರನ್ನು ತಕ್ಷಣವೇ ಸೇರ್ಪಡೆ ಮಾಡಿ, ಅವರಿಗೂ ನೆರವು ನೀಡಬೇಕು. ದೇವದಾಸಿ ಮಹಿಳೆಯರ ಮಕ್ಕಳು ಪರಸ್ಪರ ವಿವಾಹವಾದಾಗಲೂ ಪ್ರೋತ್ಸಾಹ ಧನ ನೀಡಬೇಕು.**

ದೇವದಾಸಿ ಮಹಿಳೆಯರಿಗೆ ನೀಡುವ ಭೂಮಿಯ ಮಿತಿಯನ್ನು ಎರಡು ಎಕರೆ ಯಿಂದ ಕನಿಷ್ಠ ಐದು ಎಕರೆ ನೀರಾವರಿ ಜಮೀನು ದೊರೆಯುವಂತೆ ಹೆಚ್ಚಿಸಬೇಕು, ಪ್ರತಿ ವರ್ಷ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 100 ಫಲಾನುಭವಿಗಳಿಗೆ ಜಮೀನು ದೊರೆಯುವಂತೆ ಅಗತ್ಯ ಬಜೆಟ್ ಒದಗಿಸಬೇಕು.

ದೇವದಾಸಿ ಪುನರ್ವಸತಿ ಯೋಜನೆಯಲ್ಲಿನ ಮಹಾ ಭ್ರಷ್ಟಾಚಾರ ತಪ್ಪಿಸಲು ಫಲಾನುಭವಿಗಳ ಆಯ್ಕೆಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ಲಾಟರಿ ಎತ್ತುವ ಮೂಲಕ ಮಾಡಬೇಕು, ಅದೇ ರೀತಿ ನೇರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ನೆರವು ನೀಡಲು ಕ್ರಮ ವಹಿಸಬೇಕು, ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಜಿಲ್ಲಾ ಹಾಗೂ ತಾಲ್ಲೂಕು, ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಪ್ರಕಟಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಘಟಕದ ಅಧ್ಯಕ್ಷರಾದ ಟಿ.ವಿ.ರೇಣುಕಮ್ಮ, ಉಪಾಧ್ಯಕ್ಷೆ ಸಣ್ಣ ಕೆಂಚಮ್ಮ, ತಾಲ್ಲೂಕು ಅಧ್ಯಕ್ಷೆ ಎಸ್ .ರೇಣುಕಾ, ಕಾರ್ಯದರ್ಶಿ ಎ.ಮುತ್ತಮ್ಮ, ಈರಮ್ಮ, ಕೆಂಚಮ್ಮ, ಹೂವಕ್ಕ, ಹನುಮಕ್ಕ, ಹುಲಿಕಟ್ಟಿ ರಾಜಪ್ಪ, ಹುಲಿಕಟ್ಟಿ ರೆಹಮತ್ ಸೇರಿದಂತೆ ನೂರಾರು ದೇವದಾಸಿ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ದಾವಣಗೆರೆ ಬಿಗ್ ಬಜಾರ್

## "ಮಹಾ ಉಳಿತಾಯದ 6 ದಿನಗಳು"



ದಾವಣಗೆರೆ, ಜ.19- ದಾವಣಗೆರೆಯ ಬಿಗ್ ಬಜಾರ್‌ನಲ್ಲಿ ಜ. 26 ರಿಂದ ಜ.31 ರ ತನಕ "ಮಹಾ ಉಳಿತಾಯದ 6 ದಿನಗಳು" ಆಯೋಜಿಸಲಾಗಿದೆ.

ಈ 6 ದಿನಗಳು ಅತ್ಯಂತ ಅಧಿಕ ಲಾಭದಾಯಕ ದಿನಗಳಾಗಲಿದ್ದು, ಅದರ ಲಾಭ ಪಡೆಯಲು ಗ್ರಾಹಕರು ಮುಂಚಿತವಾಗಿ (ಜ.25 ರೊಳಗೆ) 2.500 ರೂ. ಆನ್‌ಲೈನ್ ಮುಖಾಂತರ (www.shop.bigbazaar.com) ಅಥವಾ ಫ್ಯೂಚರ್ ಪೇ ಆ್ಯಪ್ ಬಳಸಿ ಖರೀದಿ ಮಾಡಿದರೆ 1,000 ರೂಪಾಯಿಯ 3 ಸೂಪರ್ ಸೇವಿಂಗ್ಸ್ ವೋಚರ್‌ಗಳು ಸಿಗಲಿವೆ. (1,000x3) ಇದು ಅಧಿಕ ಶೇ. 20 ಲಾಭದಾಯವಾಗಿದೆ.

ಇದನ್ನು ಬಿಗ್ ಬಜಾರ್‌ನಲ್ಲಿ ಜ. 23 ರಿಂದ ಮಾ. 31ರ ವರೆಗೆ ಈ ವೋಚರ್ ಮೂಲಕ ವಸ್ತುಗಳನ್ನು ಷರತ್ತುಗಳ ಅನ್ವಯದೊಂದಿಗೆ ಖರೀದಿಸಬಹುದು. ಪೇಟಿಎಮ್ ಮೂಲಕ ಖರೀದಿಯ ಮೇಲೆ ಅಧಿಕ ಶೇ. 10 ಕ್ಯಾಷ್‌ಬ್ಯಾಕ್ ಇರಲಿದೆ ಎಂದು ಮಳಿಗೆ ಪ್ರಕಟಣೆ ತಿಳಿಸಿದೆ. ಆಕ್ಸಿಸ್ ಬ್ಯಾಂಕ್ ಶೇ. 5 ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ಮೇಲೆ ಕ್ಯಾಶ್ ಬ್ಯಾಕ್ ದೊರೆಯಲಿದೆ.

* ಷರತ್ತುಗಳು ಅನ್ವಯ


## ಸಾರ್ವಜನಿಕ ಪ್ರಕಟಣೆ

ಈ ಮುಲಕ ನಾನು ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಈ ಕೆಳಕಂಡ ಆಸ್ತಿಗಳ ಮೇಲೆ ಮಾನ್ಯ ಹರಿಹರದ ಸಿವಿಲ್ ನ್ಯಾಯಾಲಯದಲ್ಲಿ O.S. No. 112/19, O.S. No. 41/19, O.S. No. 45/20ರ ಪ್ರಕರಣಗಳು ನಡೆಯುತ್ತಿರುತ್ತವೆ. ಸದರಿ ಆಸ್ತಿಗಳ ಬಗ್ಗೆ ಯಾರಾದರೂ ವ್ಯವಹಾರ ಕ್ರಯ, ಕ್ರಯ ಕರಾರು ಮಾಡಿಕೊಂಡು ವ್ಯವಹರಿಸಿದರೆ ಅದಕ್ಕೆ ಅವರೇ ಹೊಣೆಗಾರರು ಆಗಿರುತ್ತಾರೆ. ಮುಂದೆ ಆಗುವ ತೊಂದರೆಗಳಿಗೆ ತಾವೇ ಜವಾಬ್ದಾರರು ಎಂದು ಈ ಮೂಲಕ ನಾನು ಸಾರ್ವಜನಿಕರ ಗಮನಕ್ಕೆ ತರಬಯಸುತ್ತೇನೆ.

<u>**ಷೆಡ್ಯೂಲ್ :**</u> ಹರಿಹರ ತಾಲ್ಲೂಕು ಹರಲಾಪುರ ಗ್ರಾಮದ ಕಸಬಾ ಹೋಬಳಿಯ ರಿ.ಸ.ನಂ. 39/3D3 32 ಮತ್ತು ರಿ.ಸ.ನಂ. 39/3D4. 0.33 ಗು ಇರುತ್ತದೆ.

**ಜಯಶ್ರೀ ಕೋಂ. ಬಿ. ಬಸವರಾಜಪ್ಪ**

## ಎನ್‌ಎ (NA) ಆಗಿರುವ ಜಮೀನುಗಳು ಮಾರಾಟಕ್ಕಿವೆ

1. ಶ್ರೀಮತಿ ಶಿಲ್ಪ ಎಸ್.ಬಿ. ಕೋಂ. ರವಿಕುಮಾರ್ ಎಸ್.ಡಿ. ಯಾನೆ ರವಿಕುಮಾರ್ ಎಸ್.ಬಿ. ಇವರ ಹೆಸರಿನಲ್ಲಿರುವ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಆನೆಕೊಂಡದ ಸರ್ವೆ ನಂ. 43/1ಡಿ7ನಲ್ಲಿರುವ 20 ಗುಂಟೆ ಎನ್‌ಎ ಆಗಿರುವ ಜಮೀನು ಮಾರಾಟಕ್ಕಿದೆ.
2. ಶ್ರೀಮತಿ ರೇಖಾ ಎಸ್.ಬಿ. ಕೋಂ. ಸುರೇಶ್ ಯಾನೆ ಸುರೇಶ್‌ಕುಮಾರ್ ಇವರ ಹೆಸರಿನಲ್ಲಿರುವ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಆನೆಕೊಂಡದ ಸರ್ವೆ ನಂ. 43/1ಡಿ8ನಲ್ಲಿರುವ 20 ಗುಂಟೆ ಎನ್‌ಎ ಆಗಿರುವ ಜಮೀನು ಮಾರಾಟಕ್ಕಿದೆ.

ಆಸಕ್ತರು ಸಂಪರ್ಕಿಸಿ :

**ಎಸ್.ಬಸಪ್ಪ : ಮೊ –9448923963, 9483344445**

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಹಿಂದೆ ಇದೇ ದಿನಪತ್ರಿಕೆಯಲ್ಲಿ ದಿನಾಂಕ 13-1-2021 ರಂದು ನನ್ನ ಕಕ್ಷಿಗಾರರಾದ ಶ್ರೀ ಎನ್. ಮಂಜುನಾಥ ಬಿನ್ ಶ್ರೀ ಶೈಲಪ್ಪ ನಾಲವಾಡ, ದಾವಣಗೆರೆ ಇವರ ಪರವಾಗಿ ಷೆಡ್ಯೂಲ್ ಜಮೀನಿಗೆ ಸಂಬಂಧಿಸಿದಂತೆ ನನ್ನ ಕಕ್ಷಿಗಾರರು ಹಾಗೂ ಶ್ರೀ ಬಿ.ಪಿ. ಚಂದ್ರಪ್ಪ ಹಾಗೂ ಶ್ರೀ ಬಿ.ಪಿ. ಕೆಂಚಪ್ಪ ಇವರುಗಳ ನಡುವೆ ಆದ ದಿನಾಂಕ 27-06-2019 ರ ಕ್ರಯದ ಕರಾರಿನ ಆಧಾರದ ಮೇಲೆ ಬೇರೆ ಯಾರೂ ಅವರೊಡನೆ ವ್ಯವಹರಿಸಬಾರದೆಂದು ತಿಳಿಸಲಾಗಿತ್ತು. ನಂತರ ಈ ಉಭಯತರರು ದಿನಾಂಕ 27-06-2019ರ ಕ್ರಯದ ಕರಾರನ್ನು ರದ್ದುಪಡಿಸಿಕೊಂಡಿರುತ್ತಾರೆ. ಕಾರಣ ಷೆಡ್ಯೂಲ್ ಜಮೀನಿನ ಮೇಲೆ ಸದರಿ ನನ್ನ ಕಕ್ಷಿಗಾರರಿಗೆ ಯಾವುದೇ ಹಕ್ಕು ಇರುವುದಿಲ್ಲ.

ಆದ್ದರಿಂದ ಮೇಲ್ಕಂಡ ಮಾಲೀಕರಾದ ಶ್ರೀ ಬಿ.ಪಿ. ಚಂದ್ರಪ್ಪ ಹಾಗೂ ಶ್ರೀ ಬಿ.ಪಿ. ಕೆಂಚಪ್ಪ ಇವರುಗಳೊಡನೆ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಬೇರೆಯವರು ವ್ಯವಹರಿಸಲು ಸ್ವತಂತ್ರರಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಅಗಸನಕಟ್ಟೆ ಗ್ರಾಮದ ರೀ ಸರ್ವೆ ನಂ.231 ವಿಸ್ತೀರ್ಣ ಎಕರೆ 05 ಗುಂಟೆ 13 ಆಕಾರ 9.69 ಪೈಸೆ ವುಳ್ಳ ತರಿ ಜಮೀನಿಗೆ ಚಕ್ಕುಬಂದಿ : ಪೂರ್ವ : ಗಡಿ ರಸ್ತೆ, ಪಶ್ಚಿಮ : ಅಗಸನಕಟ್ಟೆ ಕೆರೆ, ಉತ್ತರ : ಸರ್ವೆ ನಂ.22 ರ ಜಮೀನು, ದಕ್ಷಿಣ : ಚಿಲಕೂರಿ ಸತ್ಯನಾರಾಯಣ ಹಾಗೂ ಇತರೆಯವರ ಜಮೀನು**

ಕಕ್ಷಿದಾರರು

**ಮಲ್ಲಿಕಾರ್ಜುನ ಕಣವಿ**, ಬಿ.ಎ, ಎಲ್‌ಎಲ್.ಎಂ.
ವಕೀಲರು, ನಂ.5 & 6, 1ನೇ ಅಂತಸ್ತು,
ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್,
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು,
ಪಿ.ಬಿ. ರಸ್ತೆ, ದಾವಣಗೆರೆ-577006.

ದಾವಣಗೆರೆ
ದಿನಾಂಕ: 10-01-2021

# ವಿದ್ಯಾರ್ಥಿಗಳ ಸಮಸ್ಯೆಗಳ ಸ್ಪಂದನೆಗೆ ಎಬಿವಿಪಿ ಆಗ್ರಹ



ದಾವಣಗೆರೆ, ಜ.19- ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸರ್ಕಾರ ತಕ್ಷಣವೇ ಸ್ಪಂದಿಸಬೇಕೆಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು (ಎಬಿವಿಪಿ) ಜಿಲ್ಲಾ ಘಟಕದ ವತಿಯಿಂದ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ನಂತರ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸಿ ರಾಜ್ಯದ ಬಡ-ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು ಹಾಗೂ ಶಿಕ್ಷಣದಿಂದ ವಂಚಿತರಾಗಬಾರದು. ಶಿಕ್ಷಣಕ್ಕೆ ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರವು ನೀಡುತ್ತಿದ್ದ ಕೆಲ ವಿದ್ಯಾರ್ಥಿ ವೇತನಗಳು ವಿದ್ಯಾರ್ಥಿಗಳಿಗೆ ಕೊರೊನಾದ ಕಷ್ಟ ಕಾಲದಲ್ಲಿ ತಲುಪದಿರುವುದು ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ತಕ್ಷಣ ಸರ್ಕಾರ ಅರ್ಜಿ ಹಾಕಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸಬೇಕು. ವಿದ್ಯಾರ್ಥಿಗಳು ತಮ್ಮ ಊರುಗಳಿಂದ ತರಗತಿಗಳಿಗೆ ಹಾಜರಾಗಲು ಕಾಲೇಜುಗಳತ್ತ ಮುಖ ಮಾಡುತ್ತಿದ್ದಾರೆ. ಆದರೆ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಹಾಸ್ಟೆಲ್ ತೆರೆದಿದ್ದು, ಉಳಿದ ವಿದ್ಯಾರ್ಥಿಗಳು ಹಾಸ್ಟೆಲ್ ವ್ಯವಸ್ಥೆ ಸಿಗದೇ ಪರದಾಡುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್‌ಗಳಲ್ಲಿ ವಸತಿ ಕಲ್ಪಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಅನೇಕ ಕಾಲೇಜುಗಳಲ್ಲಿ ಕೆಲವು ವಿಷಯಗಳಿಗೆ ಖಾಯಂ ಉಪನ್ಯಾಸಕರು ಇಲ್ಲ. ಕೂಡಲೇ ಸರ್ಕಾರ ಅತಿಥಿ ಉಪನ್ಯಾಸಕರನ್ನು ನೇಮಿಸಲು ಆದೇಶಿಸಬೇಕು. ವರ್ಷದ 12 ತಿಂಗಳುಗಳ ಕಾಲ ವೇತನ ನೀಡಬೇಕು. ರಾಜ್ಯ ಸರ್ಕಾರ ಹಾಗೂ ಉನ್ನತ ಶಿಕ್ಷಣ ಇಲಾಖೆಯು ತರಗತಿಗಳನ್ನು ಸರಿಯಾಗಿ ನಡೆಸಲು ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಸ್ಪಂದಿಸಿ ಕೋವಿಡ್ -19 ರ ನಿಯಮಾವಳಿಯ ಪಾಲನೆಗೆ ಬೇಕಾದ ಕ್ರಮಗಳ ಬಗ್ಗೆ ನಿಗಾವಹಿಸಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯಕಾರಿ ಸದಸ್ಯ ಶರತ್, ಹಾಸ್ಟೆಲ್ ಪ್ರಮುಖ ರವಿ, ಹೋರಾಟ ಪ್ರಮುಖ ವಿಜಯ್, ಸಂಪರ್ಕ ಪ್ರಮುಖ್ ದೊಡ್ಡೇಶ್, ನಗರ ಕಾರ್ಯಕಾರಿಣಿ ಸದಸ್ಯರಾದ ಕೊಟ್ರೇಶ್, ಚರಣ್, ಸುಮನ್, ನರೇಂದ್ರ ಸೇರಿದಂತೆ ಇತರರು ಭಾಗವಹಿಸಿದ್ದರು.

## ಸಿದ್ಧರಾಮಯ್ಯ ಹುಚ್ಚರಾಗಿದ್ದಾರೆ

(3ನೇ ಪುಟದಿಂದ) ಮಾಡುತ್ತದೆ ಎಂದರು. ಸಿದ್ದರಾಮಯ್ಯ, ನಾನು ಮುಂದಿನ ಸಿಎಂ ಎಂದು ಹೇಳಿಕೊಂಡಿದ್ದಾರೆ. ಇದನ್ನು ಡಿಕೆಶಿ ಸ್ಪಷ್ಟ ಪಡಿಸಲಿ. ತಾಕತ್ತಿದ್ದರೆ ಸಿದ್ದರಾಮಯ್ಯ ಅವರಿಗೆ ನೋಟಿಸ್ ಕೊಡಲಿ ಎಂದು ಸವಾಲು ಹಾಕಿದರು. ಕನಕ ಗುರುಪೀಠದ ಸ್ವಾಮೀಜಿ ಪಾದಯಾತ್ರೆ ಮಾಡುತ್ತಿದ್ದಾರೆಯೇ ಹೊರತು, ನಾನಲ್ಲ. ಕನಿಷ್ಟ ಅರ್ಧ ಕಿಲೋಮೀಟರ್ ಆದರೂ ಸಿದ್ದರಾಮಯ್ಯ ಪಾದಯಾತ್ರೆ ಮಾಡಲಿ ಎಂದರು.

## ಕ್ರಿಯಾಶೀಲ ಶಾಸಕರಿಗೆ ಪ್ರಶಸ್ತಿ

(3ನೇ ಪುಟದಿಂದ) ಸದನಗಳ ಸಂಪ್ರದಾಯದ ಬಗ್ಗೆ ಅರಿವು ಮೊದಲಾದ ಅಂಶಗಳನ್ನು ಪ್ರಶಸ್ತಿ ಆಯ್ಕೆಗೆ ಪರಿಗಣಿಸಲಾಗುತ್ತದೆ.

ಶಾಸಕರು ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಹೊಂದಿರಬೇಕು, ಸದನದ ಒಳ-ಹೊರಗೆ ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮಗಳ ಅರಿವು ಮತ್ತು ಪಾಲನೆ, ಸಭಾಧ್ಯಕ್ಷರು ನೀಡುವ ಸೂಚನೆಗಳನ್ನು ಅನುಸರಿಸುವ ಮತ್ತು ಗ್ರಹಿಸುವ ಸಾಮರ್ಥ್ಯ, ವಿಧಾನಮಂಡಲ ಮತ್ತು ವಿಧಾನಸಭೆಯ ಸಮಿತಿಗಳಲ್ಲಿ ಭಾಗವಹಿಸುವಿಕೆ. ಸದನದ ಒಳಗೆ ಮತ್ತು ಹೊರಗಿನ ನಡವಳಿಕೆ, ಸದನದಲ್ಲಿ ಹಾಜರಾತಿ, ಇತರೆ ಸದಸ್ಯರೊಂದಿಗಿನ ಸೌಹಾರ್ದಯುತ ಸಂಬಂಧ, ಸದನದಲ್ಲಿ ಕೇಳಲಾದ ಪ್ರಶ್ನೆಗಳ ಗುಣಮಟ್ಟ, ಪ್ರಸ್ತುತಪಡಿಸುವ ವಿಧಾನ, ಸದನದಲ್ಲಿ ಉಂಟಾಗುವ ಪ್ರತಿರೋಧ ಪರಿಸ್ಥಿತಿಗಳ ಕಾರ್ಯ ನಿರ್ವಹಣೆ ಸಂದರ್ಭದಲ್ಲಿ ತೋರುವ ಸಹಕಾರ ಮೊದಲಾದ ಅಂಶಗಳನ್ನು ಪ್ರಶಸ್ತಿ ಆಯ್ಕೆಗೆ ಪರಿಗಣಿಸಲಾಗುತ್ತದೆ.

ಅಸ್ಸಾಂ, ರಾಜಸ್ಥಾನ, ಜಾರ್ಖಂಡ್, ಗುಜರಾತ್ ಮೊದಲಾದ ರಾಜ್ಯಗಳಲ್ಲೂ ಅತ್ಯುತ್ತಮ ಶಾಸಕ ಪ್ರಶಸ್ತಿ ನೀಡಲಾಗುತ್ತಿದೆ.

## ಜಗಳೂರಿನಲ್ಲಿ ಇಂದು ಸಭೆ

ಬಯಲುಸೀಮೆ ಪ್ರದೇಶಾಭಿವೃದ್ದಿ ಮಂಡಳಿ ಅಧ್ಯಕ್ಷ ಎನ್.ಇ ಜೀವನಮೂರ್ತಿ ಅವರು ಬೆಳಿಗ್ಗೆ 11 ಗಂಟೆಗೆ ಜಗಳೂರು ಪ್ರವಾಸಿ ಮಂದಿರದಲ್ಲಿ ಮಂಡಳಿಯ ಕಾಮಗಾರಿಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸುವರು.

## ಗೊಲ್ಲರಹಳ್ಳಿಯಲ್ಲಿ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ



ಹೊನ್ನಾಳಿ, ಜ.19 - ತಾಲ್ಲೂಕಿನ ಗೊಲ್ಲರಹಳ್ಳಿ ಗ್ರಾಮದಲ್ಲಿ ನಾಳೆ ದಿನಾಂಕ 20ರ ಬುಧವಾರ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವ ನಡೆಯಲಿದೆ. ಈ ಜಾತ್ರಾ ಮಹೋತ್ಸವ ಕಳೆದ 6 ತಿಂಗಳ ಹಿಂದೆಯೇ ನಡೆಯಬೇಕಾಗಿತ್ತು. ಆದರೆ, ಕೊರೊನಾ ವೈರಸ್ ಸೋಂಕು ವ್ಯಾಪಕವಾಗಿ ಹರಡಿದ ಪರಿಣಾಮ ಹಬ್ಬವನ್ನು ಮುಂದೂಡಲಾಗಿತ್ತು. ಹಾಗಾಗಿ, ಇದೀಗ ಹಬ್ಬವನ್ನು ಗ್ರಾಮಸ್ಥರೆಲ್ಲರೂ ಒಗ್ಗಟ್ಟಿನಿಂದ ಆಚರಿಸಲು ಮುಂದಾಗಿದ್ದಾರೆ.

ಶ್ರೀ ದುರ್ಗಾಂಬಿಕಾ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ನಂತರ ಗ್ರಾಮದಲ್ಲಿ ಶ್ರೀ ದುರ್ಗಾಂಬಿಕಾ ದೇವಿಯ ಮೆರವಣಿಗೆ ಇಂದು ನಡೆಯಿತು. ನಾಳೆ ಬುಧವಾರ ಬೆಳಗಿನ ಜಾವ 4ಕ್ಕೆ ದೇವಿಗೆ ಉಡಿ-ಮಡಿ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ. ನಂತರ ಭಕ್ತಾದಿಗಳಿಂದ ಮಧ್ಯಾಹ್ನ 12ಕ್ಕೆ ಬೇವು ಮತ್ತು ಬೇಟೆ ಕಾರ್ಯಕ್ರಮ ನಡೆಯಲಿದೆ.

ನಾಡಿದ್ದು ದಿನಾಂಕ 21 ರಂದು ರಾತ್ರಿ 7ಕ್ಕೆ ಭದ್ರಾವತಿಯ ಸೋನಿ ಮೆಲೋಡಿಸ್ ಅವರಿಂದ ರಸಮಂಜರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

# ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದ ಚಲಾಯಿಸಿ: ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ



ಹರಪನಹಳ್ಳಿ, ಜ.19 - ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುವಾಗ ಕಾನೂನಿನ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ವಾಹನ ಚಲಾಯಿಸಬೇಕು, ಸಾರ್ವಜನಿಕರು ಚಾಚೂ ತಪ್ಪದೇ ಕಾನೂನಿನ ನಿಯಮಗಳನ್ನು ಪಾಲಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 32ನೇ ರಾಷ್ಟ್ರೀಯ ಸುರಕ್ಷತಾ ಸಪ್ತಾಹ ಸಡಕ್ ಸುರಕ್ಷ-ಜೀವನ್ ರಕ್ಷ ಕಡ್ಡಾಯ ಹೆಲ್ಮೆಟ್ ಧರಿಸಿ ಜೀವ ರಕ್ಷಿಸಿಕೊಳ್ಳಿ ಅಭಿಯಾನದ ಮೂಲಕ ಪೊಲೀಸ್ ಬೈಕ್ ರ್‍ಯಾಲಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ ಮಾತನಾಡಿದ ಅವರು, ತಾಲ್ಲೂಕಿನ ಸಾರ್ವಜನಿಕ ಮುಖಂಡರು ಪೊಲೀಸ್ ಅಧಿಕಾರಿಗಳನ್ನು ಕಾನೂನು ಬದ್ದವಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ಬಿಡಬೇಕು ಯಾರು ಕೂಡ ಇಂತಹ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಬಾರದು. ವಾಹನ ಸವಾರರು ಚಾಚೂ ತಪ್ಪದೇ ಆರ್.ಟಿ.ಓ. ಅಧಿಕಾರಿಗಳಿಂದ ಪರವಾನಿಗೆ ಪಡೆದುಕೊಂಡು ವಾಹನ ಚಾಲಿಸಬೇಕು. ಯಾರು ಕೂಡ ಕಾನೂನು ಬಾಹಿರವಾಗಿ ವಾಹನಗಳನ್ನು ಚಲಾಯಿಸಬಾರದು. ಅಪ್ರಾಪ್ತ ವಯಸ್ಕರು ಯಾರಾದರು ವಾಹನ ಚಲಾಯಿಸಿದರೆ ಅವರ ತಂದೆ-ತಾಯಿಗಳ ವಿರುದ್ಧ ಪ್ರಕರಣ ದಾಖಲಿಸಿ ಎಂದರು,

ಡಿವೈಎಸ್ಪಿ ಹಾಲಮೂರ್ತಿರಾವ್ ಮಾತನಾಡಿ, ವಾಹನ ಸವಾರರು ಯಾವ ರೀತಿ ವಾಹನ ಚಲಾಯಿಸಬೇಕು ಎಂಬುದರ ಬಗ್ಗೆ ಮಾಹಿತಿ ಇಲ್ಲದೆ ವಾಹನ ಚಲಾಯಿಸುತ್ತಾರೆ. ಇನ್ನು ಮುಂದೆ ವಾಹನ ಸವಾರರು ಕಡ್ಡಾಯವಾಗಿ ವಾಹನದ ಪರವಾನಿಗೆ ಪಡೆದುಕೊಂಡು, ಕಡ್ಡಾಯವಾಗಿ ಹೆಲ್ಮೆಟ್ ಧರಿಸಿಕೊಂಡು ನಿಯಮಾನುಸಾರವಾಗಿ ವಾಹನ ಚಲಾಯಿಸಬೇಕು ಎಂದರು.

ವಾಹನ ಸವಾರರ ಪರವಾಗಿ ಯಾವುದೇ ಮುಖಂಡರು ಬಂದು ಮನವಿ ಮಾಡಿಕೊಳ್ಳುವ ಬದಲಿಗೆ ವಾಹನ ಸವಾರರಿಗೆ ಬುದ್ದಿ ಹೇಳಿ ಇನ್ನು ಮುಂದೆ ಈ ರೀತಿ ತಪ್ಪು ಮಾಡಬೇಡ. ನೀನು ಹೋಗಿ ನಿನ್ನ ವಾಹನದ ಪರವಾನಿಗೆ ಪಡೆದುಕೊಂಡು ವಾಹನ ಚಲಾಯಿಸು ಎಂದು ವಾಹನ ಸವಾರರಿಗೆ ಬುದ್ದಿ ಹೇಳಬೇಕು ಎಂದು ಸಾರ್ವಜನಿಕ ಮುಖಂಡರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಿಪಿಐ ಕೆ. ಕುಮಾರ್, ಪಿಎಸ್ಐ ಸಿ. ಪ್ರಕಾಶ್, ಅರಸಿಕೇರಿ ಪಿಎಸ್ಐ ಕಿರಣ್ , ವಕೀಲರುಗಳಾದ ಎಂ.ಮೃತ್ಯುಂಜಯ, ಮಂಜ್ಯಾನಾಯ್ಕ್, ಶಾಂತವೀರ್ ನಾಯ್ಕ್, ರವಿಶಂಕರ್, ಪೊಲೀಸ್ ಸಿಬ್ಬಂದಿಗಳಾದ ಕೊಟ್ರೇಶ್, ದಾದಾಪುರ ರವಿ, ವಾಸುದೇವನಾಯ್ಕ್, ಮಂಜುನಾಥ್ ಮತ್ತು ಇತರರು ಇದ್ದರು.

# ನಗರದಲ್ಲಿ ಇಂದು ನದಾಫ್ - ಪಿಂಜಾರ್ ಸಂಘದ ಪ್ರತಿಭಟನೆ

ದಾವಣಗೆರೆ, ಜ.19- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ನದಾಫ್/ ಪಿಂಜಾರ್ ಸಂಘದ ಜಿಲ್ಲಾ ಘಟಕದ ವತಿಯಿಂದ ನಾಳೆ ದಿನಾಂಕ 20ರ ಬುಧವಾರ ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ ಜಿಲ್ಲಾಧಿಕಾರಿ ಕಚೇರಿ ಬಳಿ ಸಾಂಕೇತಿಕ ಧರಣಿ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿದ ಸಂಘದ ಜಿಲ್ಲಾಧ್ಯಕ್ಷ ಜೆ.ಹೆಚ್. ಉಕ್ಕಡಗಾತ್ರಿ ಅವರು, ರಾಜ್ಯದಲ್ಲಿ ಸುಮಾರು 30 ಲಕ್ಷದಷ್ಟಿರುವ ಪಿಂಜಾರ- ನದಾಫ್ ಜನಾಂಗವು ಅತಿ ಸೂಕ್ಷ್ಮ ಅಲ್ಪಸಂಖ್ಯಾತ ಜನಾಂಗವಾಗಿದೆ. ಜನಾಂಗದ ಅಭಿವೃದ್ಧಿಗೆ ರಾಜ್ಯಮಟ್ಟದ ಅಭಿವೃದ್ಧಿ ನಿಗಮ, ಮಂಡಳಿ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಅರ್ಪಿಸಿದ್ದು, ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಕೂಡಲೇ ನಿಗಮ ಸ್ಥಾಪನೆಗೆ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನದಾಫ್ - ಪಿಂಜಾರ ಜಾತಿ ಪ್ರಮಾಣ ಪತ್ರ ಪ್ರವರ್ಗ-1 ರಲ್ಲಿ ದೃಢೀಕರಣ ಪತ್ರ ನೀಡಲು ತಾಲ್ಲೂಕು ಕಚೇರಿಗಳಲ್ಲಿ ನೀಡುವ ಕಿರುಕುಳ ನಿವಾರಿಸಿ ಸರ್ಕಾರಿ ಆದೇಶದ ಪ್ರಕಾರ ಸ್ಥಳ ಮಹಜರು ನಡೆಸಿ ಜಾತಿ ದೃಢೀಕರಣ ಪತ್ರ ನೀಡಬೇಕು.

ಜನಾಂಗದ ಕುಲಕಸುಬಾದ ಹಾಸಿಗೆ ತಯಾರಿಕೆ, ಹತ್ತಿ ಹಿಂಜುವುದು ಮುಂತಾದ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ, ಸಬ್ಸಿಡಿ ದರದಲ್ಲಿ ಹತ್ತಿ, ಯಂತ್ರೋಪಕರಣ ನೀಡಬೇಕು. ಇಎಸ್ಐ ಸೌಲಭ್ಯ ಒದಗಿಸಬೇಕು. ವಸತಿ ಯೋಜನೆಯಡಿ ವಸತಿ, ನಿವೇಶನ ವಿತರಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನಿಟ್ಟುಕೊಂಡು ಧರಣಿ ನಡೆಸುವುದಾಗಿ ಮಾಹಿತಿ ನೀಡಿದರು.

ಸಂಘದ ಜಿಲ್ಲಾ ವಕ್ತಾರ ಎ.ಫಕೃದ್ದೀನ್ ಮಾತನಾಡಿದರು. ಸಂಘದ ಖಜಾಂಚಿ ಖಾದರ್ ಭಾಷ, ಸಂಘಟನಾ ಕಾರ್ಯದರ್ಶಿ ಹೆಚ್.ಎ.ದಾದಾಪೀರ್, ರಾಜ್ಯ ಆಡಳಿತ ಮಂಡಳಿ ಸದಸ್ಯ ಎ.ಆರ್. ಅಯಾಜ್ ಹುಸೇನ್, ನಗರ ಘಟಕದ ಅಧ್ಯಕ್ಷ ಅನ್ವರ್ ಹುಸೇನ್ ಎ. ಆರ್, ಹಯಾಜ್ ಹುಸೇನ್, ಟಿಪ್ಪು ಮಸ್ತಾನ್ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## 19 ವರ್ಷದೊಳಗಿನ ಕ್ರಿಕೆಟ್ ತಂಡದ ಆಯ್ಕೆ

ದಾವಣಗೆರೆ, ಜ.19- ಕೆ.ಎಸ್.ಸಿ.ಎ. ತುಮಕೂರು ವಲಯ ದಾವಣಗೆರೆ ಜಿಲ್ಲಾ 19 ವರ್ಷದೊಳಗಿನ ಕ್ರಿಕೆಟ್ ತಂಡದ ಆಯ್ಕೆಯು ಇದೇ ದಿನಾಂಕ 23 ರ ಶನಿವಾರ ಬೆಳಗ್ಗೆ 9 ಗಂಟೆಗೆ ನಗರದ ಬಾಪೂಜಿ ಎಂ.ಬಿ.ಎ. (ಟರ್ಫ್) ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ಕೆ.ಎಸ್.ಸಿ.ಎ ತುಮಕೂರು ವಲಯ ದಾವಣಗೆರೆ ಜಿಲ್ಲಾ ಸಂಚಾಲಕ ಕೆ.ಎನ್.ಗೋಪಾಲಕೃಷ್ಣ (7899610318) ಅವರನ್ನು ಸಂಪರ್ಕಿಸುವುದು.

## ಇನ್ನೂ 45 ಲಕ್ಷ ಕೊವ್ಯಾಕ್ಸಿನ್ ಖರೀದಿ

(3ನೇ ಪುಟದಿಂದ) ಖರೀದಿಗೆ ಆದೇಶಿಸಲಾಗಿದ್ದ 20 ಲಕ್ಷ ಲಸಿಕೆಗಳನ್ನು ಕೆಲವೇ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದೂ ಮೂಲಗಳು ಹೇಳಿವೆ. ಕೇಂದ್ರ ಸರ್ಕಾರ ಭಾರತ್ ಬಯೋಟೆಕ್‌ನಿಂದ 55 ಲಕ್ಷ ಲಸಿಕೆಗಳನ್ನು ಪಡೆಯಲು ಈ ಹಿಂದೆ ನಿರ್ಧರಿಸಿತ್ತು. ಕೇಂದ್ರ ಸರ್ಕಾರಕ್ಕೆ ಭಾರತ್ ಬಯೋಟೆಕ್ 16.5 ಲಕ್ಷ ಲಸಿಕೆಗಳನ್ನು ದೇಣಿಗೆಯಾಗಿ ನೀಡಿದೆ.

## ಆವರಗೆರೆಗೆ ಇಂದು ಕುರುಬರ ಎಸ್‌ಟಿ ಮೀಸಲಾತಿ ಹೋರಾಟ ಜಾಥಾ



ಕನಕ ಗುರುಪೀಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ನಿರಂಜನಾನಂದಪುರಿ ಸ್ವಾಮೀಜಿಗಳ ನೇತೃತ್ವದಲ್ಲಿ ಕುರುಬರ ಎಸ್ ಟಿ ಮೀಸಲಾತಿ ಹೋರಾಟದ ಜಾಥಾಕ್ಕೆ ಇಂದು ಬೆಳಿಗ್ಗೆ 7 ಗಂಟೆಗೆ ಆವರಗೆರೆಗೆ ಆಗಮಿಸಲಿದ್ದು, ಜಾಥಾವನ್ನು ಆವರಗೆರೆ ಕುರುಬ ಸಮಾಜದ ಬಾಂಧವರು, ಗ್ರಾಮಸ್ಥರು ಸ್ವಾಗತಿಸಲಿದ್ದಾರೆ ಎಂದು ಕುರುಬ ಸಮಾಜದ ಮುಖಂಡ ಆವರಗೆರೆ ಚಂದ್ರು ತಿಳಿಸಿದ್ದಾರೆ. ನಗರದ ಬೀರಲಿಂಗೇಶ್ವರ ದೇವಸ್ಥಾನದಿಂದ ಬೆಳಿಗ್ಗೆ 6 ಗಂಟೆಗೆ ಹೊರಟ ಕಾಲ್ನಡಿಗೆ ಜಾಥಾ 7 ಗಂಟೆಗೆ ಆವರಗೆರೆಗೆ ಆಗಮಿಸುವುದು. ಸಮಾಜದ ಮುಖಂಡರುಗಳಾದ ಎ.ಮರಿಯಪ್ಪ, ಕೆ.ಜಿ. ಉಮೇಶ್, ಎ.ತಿಪ್ಪೇಶ್, ಮಹಂತೇಶ್, ಯೋಗೇಶ್, ಶಿವರುದ್ರಪ್ಪ, ನಾಗೇಂದ್ರ, ಕರಿಬಸಪ್ಪ, ಮಂಜುನಾಥ್, ಹನುಮಂತರಾಜು ಸೇರಿದಂತೆ ಯುವಕರು ಜಾಥಾದ ಯಶಸ್ಸಿಗೆ ಸಹಕರಿಸುತ್ತಿದ್ದಾರೆ.

## ನಗರದಲ್ಲಿ ಇಂದು ವಕೀಲರ ಸಂಘದ ಪದಾಧಿಕಾರಿಗಳ ಪದಗ್ರಹಣ

ದಾವಣಗೆರೆ ವಕೀಲರ ಸಂಘದ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ. ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಗೀತಾ ಹಾಗೂ ಇತರೆ ನ್ಯಾಯಾಲಯದ ನ್ಯಾಯಾಧೀಶರು ಆಗಮಿಸಲಿದ್ದಾರೆ ಎಂದು ವಕೀಲರ ಸಂಘದ ಕಾರ್ಯದರ್ಶಿ ಬಿ.ಎಸ್. ಲಿಂಗರಾಜ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಲೆದರ್ ಬಾಲ್ ಕ್ರಿಕೆಟ್ ಟೂರ್ನಿ ಫೈನಲ್ ಪಂದ್ಯ

ಮಯೂರ ಕ್ರಿಕೆಟ್ ಕ್ಲಬ್ ವತಿಯಿಂದ ಸಂಕ್ರಾಂತಿ ಪ್ರಯುಕ್ತ ಹಮ್ಮಿಕೊಂಡಿರುವ 16 ವರ್ಷ ವಯೋಮಿತಿಯ ಬಾಲಕರ ಲೆದರ್ ಬಾಲ್ ಕ್ರಿಕೆಟ್ ಟೂರ್ನಿ ಫೈನಲ್ ಹಂತ ತಲುಪಿದ್ದು, ಇಂದು ಮಧ್ಯಾಹ್ನ 12.30ರಿಂದ ಬಳ್ಳಾರಿ ಮತ್ತು ಚಿತ್ರದುರ್ಗ ತಂಡಗಳ ನಡುವೆ ಮಯೂರ ಕಪ್‌ಗಾಗಿ ಫೈನಲ್ ಪಂದ್ಯ ನಡೆಯಲಿದೆ.

ಮೂರು ಮತ್ತು ನಾಲ್ಕನೆ ಸ್ಥಾನಕ್ಕಾಗಿ ದಾವಣಗೆರೆಯ ಕ್ರಿಕೆಟ್ ಅಕಾಡೆಮಿ ಮತ್ತು ಯುನೈಟೆಡ್ ಅಕಾಡೆಮಿಗಳ ನಡುವೆ ಬೆಳಿಗ್ಗೆ 8.30 ರಿಂದ ಪೈಪೋಟಿ ನಡೆಯಲಿದೆ. ಸಂಜೆ 4.30ಕ್ಕೆ ನಡೆಯಲಿರುವ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಡಾ. ಶಾಮನೂರು ಶಿವಶಂಕರಪ್ಪ ವಿಜೇತ ತಂಡಕ್ಕೆ ಮಯೂರ ಕಪ್ ನೊಂದಿಗೆ ನಗದು ಪುರಸ್ಕಾರ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ದಿನೇಶ್ ಕೆ.ಶೆಟ್ಟಿ, ಶ್ರೀನಿವಾಸ್, ತುಮಕೂರು ವಲಯ ಸಂಚಾಲಕ ಕೆ. ಶಶಿಧರ್, ಹುಚ್ಚವ್ವನಹಳ್ಳಿ ಮಂಜುನಾಥ್, ಮೋಹನ್ ರಾವ್, ಎಲ್.ಎಂ.ಪ್ರಕಾಶ್, ಬಸವರಾಜ್ ಇತರರು ಭಾಗವಹಿಸಲಿದ್ದಾರೆ. ನಿನ್ನೆ ನಡೆದ ಸೆಮಿಫೈನಲ್ಸ್ ಪಂದ್ಯದಲ್ಲಿ ರೋಚಕ ಗೆಲುವು ಸಾಧಿಸಿದ ಬಳ್ಳಾರಿಯ ಡಾ. ಮಸ್ತಿಕರ್ ಕ್ರಿಕೆಟ್ ಅಕಾಡೆಮಿ ಮತ್ತು ಚಿತ್ರದುರ್ಗದ ಮದಕರಿ ಕ್ರಿಕೆಟ್ ಅಕಾಡೆಮಿಗಳು ಫೈನಲ್ ಪ್ರವೇಶಿಸಿವೆ.


**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆಯಲ್ಲಿ 30x40 ಪೂರ್ವ, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, ಬನಶ್ರೀ ಬಡಾವಣೆಯಲ್ಲಿ 30x40 ದಕ್ಷಿಣ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಸೈಟ್‌ಗಳು ಮಾರಾಟಕ್ಕಿವೆ**
40x60 East, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x32 South 30x32 Corner, 30x50 west
ಐನಳ್ಳಿ ಚನ್ನಬಸಪ್ಪ, ಏಜೆಂಟ್ 93410 14130, 99166 12110

**"ಸೂರ್ಯ" ನವೋದಯ**
ರೆಗ್ಯುಲರ್ ಹೊಸ ಬ್ಯಾಚ್‌ಗಳು ಆರಂಭ ಸಮಯ: ಸಂಜೆ : 5.30 ರಿಂದ 8-00 ಸ್ಥಳ : K.S.S. ಕಾಲೇಜು, ದುರ್ಗಾಂಬಿಕ ಹೈಸ್ಕೂಲ್ ಹತ್ತಿರ ಸರಸ್ವತಿ ಬಡಾವಣೆ.
ಸುರೇಶ್ ಪಿ. ಮುರಗಿ 99028 24909

**ಮನೆಗಳು ಮಾರಾಟಕ್ಕಿವೆ**
ವಿದ್ಯಾನಗರ 40x60 (ಉತ್ತರ), ಸಿದ್ದವೀರಪ್ಪ ಬಡಾವಣೆ 40x70 (ಪೂರ್ವ) ಡುಪ್ಲೆಕ್ಸ್ , 30x40, ಮನೆ ಮತ್ತು ಮೇಲೆ ರೂಂಗಳು, ನಿಜಲಿಂಗಪ್ಪ ಬಡಾವಣೆ 30x35 ಉತ್ತರ ಬಾಗಿಲ ಮನೆ , 30x40 ಪೂರ್ವ, ಬಾಲಾಜಿ ಲೇಔಟ್ 30x40 (ಪೂರ್ವ), 30x50 (ಪಶ್ಚಿಮ) ಎಂ.ಸಿ.ಸಿ. 'ಎ' ಬ್ಲಾಕ್ 44x60 (ಪೂರ್ವ) ಮೇಲೆ ಕೆಳಗೆ ಮನೆ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ: ಸುರೇಶ್ 95911 60520, ಐಗೂರು ವಿಜಯಕುಮಾರ್ 99457 02495

**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ 34x40 (ಪೂರ್ವ), 54x40 (ಪೂರ್ವ ಕಾರ್ನರ್) 30x50 (ಪಶ್ಚಿಮ) , ಜೆ.ಹೆಚ್. ಪಟೇಲ್ ಬಡಾವಣೆ 40x60 (ಉತ್ತರ) ಮೇಲೆ ಎರಡು ಮನೆ.
ಸೈಟ್‌ಗಳ ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ ಸುರೇಶ್: 95911 60520 ಐಗೂರು ವಿಜಯ್ ಕುಮಾರ್ 99457 02495

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x46 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, ಆಂಜನೇಯ ಬಡಾವಣೆಯಲ್ಲಿ 40x65 ಉತ್ತರ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ ದಕ್ಷಿಣ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ : ಮೊ.94489 66128

**ಬೇಕಾಗಿದ್ದಾರೆ**
ಅನುಭವವುಳ್ಳ ಸ್ಟಾಫ್‌ನರ್ಸ್ ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ವಸತಿ ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. 99725 23910

**ಕ್ಲಿನಿಕ್ ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.**
ವಿಳಾಸ: ಡಾ. ಎನ್.ಹೆಚ್.ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ ಎಸ್.ಎಸ್ 'ಬಿ' ಬ್ಲಾಕ್‌ನಲ್ಲಿ 35x46 North East corner ಮನೆ 3 ಬೆಡ್ ರೂಂ
ಐನಳ್ಳಿ ಚನ್ನಬಸಪ್ಪ, ಏಜೆಂಟ್ 93410 14130, 99166 12110

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. 94838 62779

**ಬೇಕಾಗಿದ್ದಾರೆ**
ಸಸ್ಯಹಾರಿ ಮತ್ತು ಮಾಂಸಹಾರಿ ರೆಸ್ಟೋರೆಂಟ್ ನಲ್ಲಿ ಸಪ್ಲೈಯರ್ ಕೆಲಸ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಸ್ಥಳೀಯರಿಗೆ ಮಾತ್ರ ಅವಕಾಶ.
ಪವಾರ್ ಫ್ಯಾಮಿಲಿ ರೆಸ್ಟೋರೆಂಟ್ ಹಿಂದೂ ಮರಾಠ ಮಿಲ್ಟ್ರಿ ಹೋಟೆಲ್ ಅರುಣ ಟಾಕೀಸ್ ಸರ್ಕಲ್ ಸಿತಾರ ಹೋಟೆಲ್ ಪಕ್ಕ, ಪಿ.ಬಿ.ರಸ್ತೆ, ದಾವಣಗೆರೆ.

**WANTED**
Full Time Lecturers Qualification M.Sc Nursing with Teaching experience
99020 55335 63604 91454

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ, 30x40, 30x57, 38½x40 , (ಪಶ್ಚಿಮ), 30x40 (ಪೂರ್ವ), 30x40 (ಕಾರ್ನರ್ ಪೂರ್ವ), 44x30, 47x30, 30x40 (ಪೂರ್ವ), ಹೊಸ ಬನಶಂಕರಿ 30x55 (ಪಶ್ಚಿಮ) 30x60 (ಪೂರ್ವ ಉತ್ತರ) 30x60 (ಪೂರ್ವ+ಉತ್ತರ ಕಾರ್ನರ್), ಮಲ್ಲಿಕಾರ್ಜುನ ಬಡಾವಣೆ, 30x55 (ಪೂರ್ವ)
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ: 95911 60520 -ಸುರೇಶ್ 99457 02495- ಐಗೂರು ವಿಜಯ್ ಕುಮಾರ್

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391 ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**WANTED**
For Marketing & Office Work (Male)
NEEMS DISTRIBUTORS # 574/1, 6th Main Road, P.J. Extention, Davanager.

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.00 ರಿಂದ ಸಂಜೆ 8:00 ರವರೆಗೆ ಸಂಪರ್ಕಿಸಿ:
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್ ಲಾಯರ್ ರಸ್ತೆ, ಟೈರ್ ಅಂಗಡಿಗಳ ಹತ್ತಿರ, ದಾವಣಗೆರೆ.

**Wanted Teachers**
(Part time or Full Time)
No of posts: 1)BSc :-01, 2)BSc BEd(PCM):-01
NISARGA CONVENT & HIGH SCHOOL SOG Badavane, Davangere.
Contact us: 99862 26454.

**ಮಳಿಗೆ ಬಾಡಿಗೆಗೆ ಇದೆ**
ಬಾಬು ಕ್ಲಿನಿಕ್ ಪಕ್ಕದಲ್ಲಿ ವಸಂತ ರೋಡ್ (ಆಸ್ಪತ್ರೆ ಪ್ರಾರಂಭವಾಗಿದೆ ಬೆ.10.30 ರಿಂದ ಮಧ್ಯಾಹ್ನ 12.30 ರವರೆಗೆ) ಸಂಪರ್ಕಿಸಿ: 97400 91291 88924 88265

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ 18 ರಿಂದ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಮನೆ ಮಾರಾಟಕ್ಕೆ**
ದಾವಣಗೆರೆ ಪಿಸಾಳೆ ಕಾಂಪೌಂಡ್, 2ನೇ ಕ್ರಾಸ್ (#792/2) ನಲ್ಲಿ 17x20ರ ಅಳತೆಯ 2 ಫ್ಲೋರ್ 1 BHK ಮನೆ ಮಾರಾಟಕ್ಕೆ ಇದೆ.
ಸಂಪರ್ಕಿಸಿ: 99724 58996

**ಬೇಕಾಗಿದ್ದಾರೆ**
ದಾವಣಗೆರೆ ಹತ್ತಿರ ಬೇತೂರು ಮತ್ತು ನಲ್ಲೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟೀಸ್ ಮತ್ತು ರೂಂ ಬಾಯ್ಸ್ ಹಾಗೂ ಲಾಡ್ಜ್‌ನಲ್ಲಿ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳ. ಕೂಡಲೇ ಸಂಪರ್ಕಿಸಿ :
74113 07071, 98806 48207

**ಮನೆ ಬಾಡಿಗೆಗೆ ಇದೆ**
ಸರಸ್ವತಿ ಬಡಾವಣೆಯಲ್ಲಿ 3 ಬೆಡ್ ರೂಮಿನ ಪೂರ್ವ ಫೇಸಿಂಗ್ ಇಂಡಿಪೆಂಡೆಂಟ್ ಡುಪ್ಲೆಕ್ಸ್ ಮನೆ ಬಾಡಿಗೆಗೆ ಇದೆ.
99023 83936 82172 14069

**TO LET**
1st Floor-2BHK (only Veg) Taralabalu Badavane 1st Main, 15th Cross,
98800 00695 88805 00555

**House for Rent**
at siddaveerappa layout Davangere 2 BHK, Municipal water and borewell water available, solar for hot water, Dining hall with store room, parking space with varandaha, Main door North facing. Rent:12,000 (Rent amount negotiable)
Contact : Vinay V.N. 99023 49342

**ಉತ್ತಮ ಜಲ್ಲಿ ದೊರೆಯುತ್ತದೆ**
20mm, 40mm, M-ಸ್ಯಾಂಡ್ P- ಸ್ಯಾಂಡ್ ದೊರೆಯುತ್ತದೆ.
ಸಿಗಂಧೂರೇಶ್ವರಿ ಬಿಲ್ಡಿಂಗ್ ಮೆಟೀರಿಯಲ್ ಸಪ್ಲೈಯರ್ಸ್, ದಾವಣಗೆರೆ.
85533 73710 91646 69272

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ. ಮೊ: 95135 79130, 80509 52637

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
ಸಂಪರ್ಕಿಸಿ: 94805 64551 91418 74551

**REQUIRED Lady Teachers**
Science Post-01, B.Sc. B.Ed (P.C.M)
Attractive Salary will be given to right candidates, Apply or Contact to Dr. Veeresh, Biradar, Secretary
Vinayaka Eng Medium High School Ganesh pet, Behind kalikadevi temple, Davanagere - 95356 10817

**Change of Name**
I Sukanya C.M. w/o Dr.K.S.Basvarajappa age about 52 years residing at # 2038/8,9, siddeshwara krupa, 7th cross, vinayaka Badavane, Vidyanagara, Davangere -577005 has changed my name as Sukanya Basavaraj before Notary on 19.01.2021. In future all mytransactions and doucoments are will be in my name as undersigned. -Sukanya Basavaraj

**ಮಹಿಳೆ ತಕ್ಷಣ ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ವಯಸ್ಸಾದ ತಾಯಿಯನ್ನು ನೋಡಿಕೊಂಡು ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಮನೆ ಅಡುಗೆ ಕೆಲಸ ಮಾಡಿಕೊಂಡು ಹೋಗಲು ಒಬ್ಬ ಹೆಣ್ಣು ಮಗಳು ಬೇಕಾಗಿದ್ದಾರೆ (ಲಿಂಗಾಯಿತರಿಗೆ ಆದ್ಯತೆ) ತಕ್ಷಣ ಸಂಪರ್ಕಿಸಿರಿ. ಮೊಬೈಲ್ ನಂ
94496 79324
(ಸಂಪರ್ಕಿಸುವ ಸಮಯ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಮಾತ್ರ)

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಕೆಲ್ಸಬೇಕಾ.Com**
kelsabeka.com, job Consultancy
Be professional & Be Educated
ನೀವು ಕೆಲಸಕ್ಕಾಗಿ ಹುಡುಕಾಟ ನಡೆಸಿದ್ದೀರಾ? ಕೆಲಸ ಇಲ್ಲವೇ, ಕೆಲಸವಿಲ್ಲದೇ ಚಿಂತೆಯಲ್ಲಿದ್ದೀರಾ? ಹಾಗಾದರೆ ಇಂದೇ ಬನ್ನಿ ನಿಮ್ಮ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ನಮ್ಮಲ್ಲಿವೆ. We Provide all Types of Job
96869 58555, 96869 49555

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು ದಿ. 20-01-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. 08192-222292

**ಪ್ರೊಫೆಷನಲ್ ಮೇಕಪ್ ಆರ್ಟಿಸ್ಟ್ ತರಬೇತಿ**
50% ಆಫರ್ ಫೀನಲ್ಲಿ ನಡೆಯುತ್ತದೆ. ಮೊದಲ ಬಂದ 10 ಜನರಿಗೆ ಮಾತ್ರ ಅವಕಾಶ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
CS ಮೇಕಪ್ ಸ್ಟುಡಿಯೋ ವಿನೋಬನಗರ, ದಾವಣಗೆರೆ. 70190 73324

**WANTED**
Looking For A Person From Any Corporate Background For Our New Firm In Davanagere
Contact 90970 70333

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ: 82177 72482

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02 84531 61869

**ಟಿ.ಸಿ. ಕಳೆದಿದೆ**
ದಾವಣಗೆರೆ ಸಿಟಿ ಯಲ್ಲಮ್ಮನಗರ, 3ನೇ ಮೇನ್, 9ನೇ ಕ್ರಾಸ್ ವಾಸಿ ಪುನೀತ್ ಎಂ.ಆರ್. ಬಿನ್ ರಾಜಪ್ಪ ಈ ಹೆಸರಿನ ದ್ವಿತೀಯ ಪಿ.ಯು.ಸಿ (ವಾಣಿಜ್ಯ) ವರ್ಗಾವಣೆ ಪತ್ರದ ಮೂಲ ಪ್ರತಿ ದಿನಾಂಕ 6.01.2021ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ವಿನೋಬನಗರ 2ನೇ ಮೇನ್‌ನಲ್ಲಿ ಜೆರಾಕ್ಸ್ ಮಾಡಿಸಲು ಹೋದಾಗ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಮನವಿ.
ಪುನೀತ್ ಎಂ.ಆರ್. 77605 58541

**ಶ್ರೀ ಮಂಜುನಾಥ ಸ್ವಾಮಿ ಜೋತಿಷ್ಯರು**
ಪಂಡಿತ್ ಮಂಜುನಾಥ ಭಟ್
ಇವರು ರಾಜ್ಯದಲ್ಲಿ ನಂ 1 ವಶೀಕರಣ ಸ್ಪೆಷಲಿಸ್ಟ್, (ಸ್ತ್ರೀ-ಪುರುಷ ವಶೀಕರಣ ಕೇವಲ 3 ದಿನದಲ್ಲಿ ಪರಿಹಾರ ಮಾಡುತ್ತಾರೆ) ವಿದ್ಯೆ, ಉದ್ಯೋಗ, ಆರೋಗ್ಯ, ಮಾಟ ಮಂತ್ರ ನಿಮ್ಮ ಯಾವುದೇ ಸಮಸ್ಯೆ ಇದ್ದರೆ ಅತೀ ಶೀಘ್ರ ಪರಿಹಾರ ಶತಸಿದ್ಧ. ಕೊಳ್ಳೆಗಾಲ, ಕೇರಳ ರೀತಿಯಲ್ಲಿ ಪರಿಹಾರ ತಿಳಿಸುತ್ತಾರೆ.
94497 96933

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561 ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**SSLC/PUC CORRESPONDENCE**
ಸುವರ್ಣ ಅವಕಾಶ ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ. 85532 78258, 86601 95955

**DIPLOMA & BE TUITIONS For All Branches**
ಸಮೃದ್ಧಿ ಕೋಚಿಂಗ್ ಅಕಾಡೆಮಿ 81472 62361

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಪೇಲ್ Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ. 90195 80600, 86601 95955

**ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ**
ಪಂಡಿತ್ ಪರಶುರಾಮ್ ಭಟ್
ಕೊಳ್ಳೇಗಾಲದ ವಂಶಪಾರಂಪರಿಕ ಜ್ಯೋತಿಷ್ಯರು ಇವರು ದಾವಣಗೆರೆಗೆ ಪ್ರಥಮ ಬಾರಿಗೆ ಆಗಮಿಸಿದ್ದಾರೆ. ನಿಮ್ಮ ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ ಉಚಿತ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಧನಪ್ರಾಪ್ತಿ, ಪ್ರೇಮವಿಚಾರ, ಮಾನಸಿಕ ಸಮಸ್ಯೆ, ವ್ಯಾಪಾರದಲ್ಲಿ ಲಾಭ-ನಷ್ಟ, ಮನೆಯಲ್ಲಿ ಅಶಾಂತಿ, ಶತ್ರುಕಾಟ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ ಇಂದೇ ಭೇಟಿ ಕೊಡಿ.
ವಿಳಾಸ : ಹೊಸ ಕೋರ್ಟ್ ಎದುರು, ಪಿ.ಬಿ.ರಸ್ತೆ, ದಾವಣಗೆರೆ ಮೊ: 99808 89328

ಶ್ರೀ ನಿಧಿ ಎಜುಕೇಷನಲ್ ಟ್ರಸ್ಟ್- ದಾವಣಗೆರೆ.
**ಪ್ರಿನ್ಸ್ ದೂರ ಶಿಕ್ಷಣ ಕಾಲೇಜ್**
(Distance Education) (UGC, DEB, & AICTE Approved university)
SSLC, PUC, B.A, B.Com, B.Sc, B.C.A, M.A, M.Com, M.Sc, M.S,W, MBA, MCA, Diploma, B.E, LLB, LLM, Ph.D & all Coursses
97408 51555, 97405 52555

**WANTED ಬೇಕಾಗಿದ್ದಾರೆ**
Waiters - ವೇಟರ್ಸ್, Stewards- ಸ್ಟೀವರ್ಡ್ಸ್
Experienced Preferred
ಆಕರ್ಷಕ ಸಂಬಳ ನೀಡಲಾಗುವುದು
ಸಂಪರ್ಕಿಸಿ: 63628 20412 93809 74740

## ಇನ್ನೂ 45 ಲಕ್ಷ ಕೊವ್ಯಾಕ್ಸಿನ್ ಖರೀದಿ

ಹೈದರಾಬಾದ್, ಜ. 19 – ಇನ್ನೂ 45 ಲಕ್ಷ ಕೊರೊನಾ ಲಸಿಕೆ ಗಳನ್ನು ಖರೀದಿಸುವ ಭರವಸೆ ಪತ್ರ ವನ್ನು ಕೇಂದ್ರ ಸರ್ಕಾರ ಭಾರತ್ ಬಯೋಟೆಕ್‌ಗೆ ನೀಡಿದೆ. ಭಾರತ್ ಬಯೋಟೆಕ್ ಕೊವ್ಯಾಕ್ಸಿನ್ ಲಸಿಕೆಯನ್ನು ಉತ್ಪಾದಿಸುತ್ತಿದೆ. ಕೇಂದ್ರ ಸರ್ಕಾರ ಪಡೆಯಲಿ ರುವ 45 ಲಕ್ಷ ಲಸಿಕೆಗಳ ಪೈಕಿ ಎಂಟು ಲಕ್ಷ ಲಸಿಕೆಯನ್ನು ಮಾರಿ ಷಸ್, ಫಿಲಿಪೈನ್ಸ್ ಹಾಗೂ ಮ್ಯಾನ್ ಮಾರ್ ರೀತಿಯ ಸ್ನೇಹಿತ ದೇಶಗ ಳಿಗೆ ಉಚಿತವಾಗಿ ಸದಾಶಯ ದೃಷ್ಟಿಯಿಂದ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ಖರೀದಿಗೆ ಆದೇಶಿಸಲಾಗಿದ್ದ 20 ಲಕ್ಷ ಲಸಿಕೆಗಳನ್ನು ಕೆಲವೇ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದೂ ಮೂಲಗಳು ಹೇಳಿವೆ. ಕೇಂದ್ರ ಸರ್ಕಾರ ಭಾರತ್ ಬಯೋಟೆಕ್‌ನಿಂದ 55 ಲಕ್ಷ ಲಸಿಕೆಗಳನ್ನು ಪಡೆಯಲು ಈ ಹಿಂದೆ ನಿರ್ಧರಿಸಿತ್ತು. ಕೇಂದ್ರ ಸರ್ಕಾರಕ್ಕೆ ಭಾರತ್ ಬಯೋಟೆಕ್ 16.5 ಲಕ್ಷ ಲಸಿಕೆಗಳನ್ನು ದೇಣಿಗೆಯಾಗಿ ನೀಡಿದೆ.

## ಖಾತೆ ಹಂಚಿಕೆ ಬಿಕ್ಕಟ್ಟು

**(3ನೇ ಪುಟದಿಂದ)** ಹರಿಸಲಾಗಿರಲಿಲ್ಲ. ಆದರೆ, ಯಾರಿಗೆ ಯಾವ ಇಲಾಖೆ ಕೊಡಬೇಕೆಂಬ ಬಗ್ಗೆ ಪಟ್ಟಿ ಸಿದ್ದ ಮಾಡಿಕೊಂಡಿದ್ದಾರೆ. ವರಿಷ್ಠರು ನೀಡಿರುವ ಮಾರ್ಗಸೂಚಿಯನ್ನು ಆಧಾರವಾಗಿ ಇಟ್ಟುಕೊಂಡು ಯಾವುದೇ ಸಂದರ್ಭ ದಲ್ಲಿ ಖಾತೆ ಹಂಚಿಕೆ ಆಗಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

## ಯೋಗೇಶ್ವರ್ ಕೈ ಬಿಡಲು ಆಗ್ರಹ

**(3ನೇ ಪುಟದಿಂದ)** ರೇಣುಕಾಚಾರ್ಯ ಬೆನ್ನ ಹಿಂದೆ ಆಡಳಿತದಲ್ಲಿರುವ ಪ್ರಭಾವಿ ನಾಯಕರು ನಿಂತಿದ್ದಾರೆ, ಅವರ ಮಾರ್ಗದರ್ಶನದಂತೆ ಈ ಚಟುವಟಿಕೆ ನಡೆಯುತ್ತಿರುವುದಲ್ಲದೆ, ಅವರ ಸಹಕಾರದಿಂದಲೇ ವರಿಷ್ಠರ ಭೇಟಿಯೂ ಆಗಿದೆ ಎಂದು ಹೇಳಲಾಗುತ್ತಿದೆ.

# ನಗರದಲ್ಲಿ ಕಾಗಿನೆಲೆ ಶ್ರೀಗಳ ಪಾದಯಾತ್ರೆಗೆ ಅದ್ಧೂರಿ ಸ್ವಾಗತ





ದಾವಣಗೆರೆ, ಜ.19- ಕುರುಬ ಸಮುದಾಯಕ್ಕೆ ಎಸ್ಟಿ ಮೀಸಲಾತಿ ನೀಡಬೇಕೆಂಬ ಕೂಗಿನೊಂದಿಗೆ ಕಾಗಿನೆಲೆ ಜಗದ್ಗುರು ಶ್ರೀ ನಿರಂಜನಾ ನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಬೃಹತ್ ಪಾದ ಯಾತ್ರೆಯು ಇಂದು ಸಂಜೆ ನಗರ ಕ್ಕಾಗಮಿಸಿತು. ಈ ವೇಳೆ ಭಕ್ತಿಪೂರ್ವಕ ವಾಗಿ ಶ್ರೀಗಳನ್ನೊಳಗೊಂಡಂತೆ ಅದ್ಧೂರಿ ಪಾದಯಾತ್ರೆಯನ್ನು ಸ್ವಾಗತಿಸಲಾಯಿತು.

ಹರಿಹರದಿಂದ ದೊಡ್ಡ ಬಾತಿಗೆ ಆಗಮಿಸಿ ನಂತರ ನಗರಕ್ಕಾಗಮಿಸಿದ ಪಾದಯಾತ್ರೆಯನ್ನು ನಗರದ ಪ್ರವೇಶ ದ್ವಾರದ ಬಳಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ರಾಜ್ಯ ಕುರುಬರ ಎಸ್ಟಿ ಹೋರಾಟ ಸಮಿತಿ ಖಜಾಂಚಿ ಕೆ.ಇ. ಕಾಂತೇಶ್ ಸೇರಿದಂತೆ ಸಮುದಾಯದ ಮುಖಂಡರು, ಭಕ್ತರು ಶ್ರೀಗಳಿಗೆ ಪುಷ್ಪ ಹಾರ ಸಮರ್ಪಿಸಿ ಸ್ವಾಗತಿಸಿದರಲ್ಲದೇ, ಕಾರ್ಯಕ್ರಮದ ಸ್ಥಳದವರೆಗೂ ಪಾದಯಾತ್ರೆಯೊಂದಿಗೆ ಹೆಜ್ಜೆ ಹಾಕಿದರು. ನಗರ ಪ್ರವೇಶ ಮಾಡಿದ ಸಂದರ್ಭದಲ್ಲಿ ಮಹಿಳೆಯರು ಕಳಸ ದೊಂದಿಗೆ ಆರತಿ ಬೆಳಗಿ ಶ್ರೀಗಳನ್ನು, ಪಾದಯಾತ್ರಿಗಳನ್ನು ಸ್ವಾಗತಿಸಿದರು.

ಜಿಎಂಐಟಿ ಬಳಿ ಸಂಸದ ಜಿ.ಎಂ. ಸಿದ್ದೇಶ್ವರ ಶ್ರೀಗಳನ್ನು ಸ್ವಾಗತಿಸಿದರು. ಪಾಲಿಕೆ ಉಪ ಮೇಯರ್ ಶ್ರೀಮತಿ ಸೌಮ್ಯ ನರೇಂದ್ರ ಕುಮಾರ್, ಪಾಲಿಕೆ ಸದಸ್ಯರಾದ ಎಸ್.ಟಿ. ವೀರೇಶ್, ಪ್ರಸನ್ನ ಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಇದ್ದರು.

ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಶ್ರೀಗಳ ನೇತೃತ್ವದ ಪಾದಯಾತ್ರೆಯನ್ನು ಅದ್ಧೂರಿ ಯಾಗಿ ಸಮುದಾಯದ ಮುಖಂಡರು, ಭಕ್ತರು ಪುಷ್ಪಾರ್ಚನೆ ಮಾಡಿ, ಸ್ವಾಗತಿಸಿದರು. ಆನೆಯೂ ಶ್ರೀಗಳಿಗೆ ಪುಷ್ಪ ಹಾರ ಹಾಕುವುದರ ಮೂಲಕ ಆಶೀರ್ವದಿಸಿತು. ದಾರಿಯುದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಶ್ರೀಗಳಿಗೆ ಭಕ್ತರು, ಸಮಾಜದ ಜನರು ಪುಷ್ಪವೃಷ್ಟಿಗೈದು ಸ್ವಾಗತಿಸಿದರು. ಈ ಅದ್ಧೂರಿ ಕ್ಷಣಕ್ಕೆ ಸಾಕ್ಷಿಯಾದ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಹ ಶ್ರೀಗಳಿಗೆ ಪುಷ್ಪ ಹಾರ ಸಮರ್ಪಿಸಿ, ಆಶೀರ್ವಾದ ಪಡೆದರು.

ಕುರುಬ ಸಮುದಾಯ ಬುಡಕಟ್ಟು ಜನಾಂಗದವರು, ಎಸ್ಟಿ ಮೀಸಲಾತಿ ನಮ್ಮ ಹಕ್ಕು ಎಂಬಿತ್ಯಾದಿ ಘೋಷ ವಾಕ್ಯಗಳನ್ನು ಮೊಳಗಿಸುತ್ತಾ ಪಾದಯಾತ್ರಿಗಳು ಹಿಂಡು ಹಿಂಡಾಗಿ ಸಾಗಿದರು. ಶ್ರೀಗಳು ಅವರ ಹಿಂದೆ ಸಾಗಿದರು. ಪಾದಯಾತ್ರೆಯಲ್ಲಿ ಬೆಳ್ಳಿರಥ ಸಾರೋಟದಲ್ಲಿ ಶ್ರೀ ಕನಕ ಗುರುವಿನ ಮೂರ್ತಿ, ಡೊಳ್ಳು ಕುಣಿತ, ಗೊರವಪ್ಪಗಳ ಗುಂಪು ಮೆರಗು ನೀಡಿತು. ಪಾದಯಾತ್ರಿಗಳು ಹಳದಿ ಬಣ್ಣದ ಪೇಟೆ, ಕಂಬಳಿ ಹೆಗಲ ಮೇಲೆ ಹೊತ್ತು ಸಾಗಿದ್ದು ಕಳೆ ನೀಡಿತು.

ಶ್ರೀಗಳು ನಗರ ಪ್ರವೇಶ ಮಾಡುತ್ತಿದ್ದಂತೆ ಯುವಕರು ಶ್ರೀಗಳ ಬಳಿ ತೆರಳಿ ಸೆಲ್ಫಿ ಪಡೆಯುತ್ತಿದ್ದರು. ರಸ್ತೆಯ ಒಂದು ಭಾಗದಲ್ಲಿ ಸಾಗುತ್ತಿದ್ದ ಪಾದಯಾತ್ರೆಯಲ್ಲಿ ವೃದ್ಧರೂ ಊರುಗೋಲು ಹಿಡಿದು ಸಾಗುತ್ತಿದ್ದರೆ, ಯುವಕರು ಘೋಷಣೆ ಕೂಗುತ್ತಿದ್ದರು. ಮಹಿಳೆಯರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

## ಸೌಲಭ್ಯಕ್ಕಾಗಿ ಜಯಮೃತ್ಯುಂಜಯ ಶ್ರೀ ಹೋರಾಟ



**(1ನೇ ಪುಟದಿಂದ)** ಮೇಲೆ ತಂದೆ-ತಾಯಿ ಋಣ, ಸಮಾಜದ ಋಣ ತೀರಿಸುವುದು ಸಹಜ ಧರ್ಮ ವಾಗಿದೆ. ಅದರಂತೆ ಪಂಚಮಸಾಲಿ ಗುರುಪೀಠಾಧ್ಯ ಕ್ಷರಾಗಿ ಆಯ್ಕೆಗೊಂಡ ಶ್ರೀಗಳು ಪಂಚಮಸಾಲಿ ಸಮಾಜದಲ್ಲಿ ಭಕ್ತರು ಆರ್ಥಿಕ, ಶೈಕ್ಷಣಿಕ, ಧಾರ್ಮಿಕವಾಗಿ ಮತ್ತು ಉದ್ಯೋಗದಲ್ಲಿ ಹಿಂದೆ ಇರುವುದನ್ನು ಗಮನಿಸಿ, ಸಮಾಜದ ಮುಖಂಡರು ಮಾಡುತ್ತಿರುವ ಮೀಸಲಾತಿ ಹೋರಾಟ ಮಾಡಿ ಸಮಾಜದವರಿಗೆ ಸರಿಯಾದ ಸೌಲಭ್ಯಗಳನ್ನು ಕೊಡಿಸಬೇಕು ಎಂಬ ಮನಸ್ಸಿನೊಂದಿಗೆ ಈ ಹೋರಾಟದ ಹಾದಿಯನ್ನು ತುಳಿದಿದ್ದಾರೆ. ಇವರ ಪಾದಯಾತ್ರೆ ನಾಡಿನಾದ್ಯಂತ ಪಂಚಮಸಾಲಿ ಸಮಾಜದವರ ಜೊತೆಗೆ ಇತರೆ ಅನ್ಯ ವರ್ಗದ ಸಮಾಜದವರೂ ಸಹ ಅಭೂತಪೂರ್ವ ಬೆಂಬಲ ನೀಡುತ್ತಿರುವುದನ್ನು ನೋಡಿದಾಗ, ಶ್ರೀಗಳು ಮಾಡುತ್ತಿರುವ ಪಾದಯಾತ್ರೆ ಹೋರಾಟಕ್ಕೆ ಸರ್ಕಾರವು ಆದಷ್ಟು ಬೇಗನೇ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಮತ್ತು ಕೇಂದ್ರ ಸರ್ಕಾರವು ಒಬಿಸಿ ಮಾನ್ಯತೆ ನೀಡಲಿದೆ ಎಂಬ ಭರವಸೆ ಹೊಂದಿರುವುದಾಗಿ ತಿಳಿಸಿದರು.

ವಾಲ್ಮೀಕಿ ಶ್ರೀಗಳು ಹಮ್ಮಿಕೊಂಡಿರುವ ಪಾದಯಾತ್ರೆ ಸಮಯದಲ್ಲಿ ಅವರ ಜೊತೆಗೆ ಹೆಜ್ಜೆ ಹಾಕಿರುವುದಾಗಿ ತಿಳಿಸಿದ ಅವರು, ತಾವು ನಿನ್ನೆ ನಗರದಲ್ಲಿ ಇರದೇ ಇದ್ದುದರಿಂದ ಕನಕ ಶ್ರೀಗಳ ಜೊತೆಗೆ ಹೆಜ್ಜೆ ಹಾಕಲು ಆಗಲಿಲ್ಲ. ನಾಳೆ ಕನಕ ಪೀಠದ ಶ್ರೀಗಳ ಜೊತೆಗೆ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವುದಾಗಿ ಹೇಳಿದರು.

ಇದೇ ದಿನಾಂಕ 29 ರಂದು ಹರಪನಹಳ್ಳಿ ಮಾರ್ಗವಾಗಿ ಹರಿಹರ ನಗರಕ್ಕೆ ಸಂಜೆ ಶ್ರೀ ಜಯ ಮೃತ್ಯುಂಜಯ ಮಹಾಸ್ವಾಮಿಗಳ ಪಾದಯಾತ್ರೆ ಆಗಮಿಸಲಿದ್ದು, ಅವರನ್ನು ವಿಜೃಂಭಣೆಯಿಂದ ಸ್ವಾಗತಿಸುವ ಮೂಲಕ ಗಾಂಧಿ ಮೈದಾನದ ವೇದಿಕೆಗೆ ಕರೆ ತರಲಾಗುತ್ತದೆ. ವೇದಿಕೆ ಕಾರ್ಯಕ್ರ ಮಕ್ಕೆ ಶಾಸಕ ಬಸವನಗೌಡ ಪಾಟೀಲ್ ಮತ್ತು ಸಮಾಜದ ಹಿರಿಯ ಮುಖಂಡರು, ಶಾಸಕರು ಸಂ ಸದರು ಆಗಮಿಸುತ್ತಾರೆ. ಮಧ್ಯ ಕರ್ನಾಟಕ ಭಾಗ ದಲ್ಲಿ ಆಗುವುದರಿಂದ ಸಹಸ್ರಾರು ಸಂಖ್ಯೆಯಲ್ಲಿ ಪಂಚಮಸಾಲಿ ಸಮಾಜದ ಭಕ್ತರು ಮತ್ತು ಇತರೆ ವರ್ಗದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ರೆಂದು ನಿರೀಕ್ಷಿಸಲಾಗಿದೆ. ಈ ಸಮಾರಂಭಕ್ಕೆ ಸಮಿತಿಯನ್ನು ರಚಿಸಲಾಗಿದ್ದು, ಅಧ್ಯಕ್ಷರಾಗಿ ದೀಟೂರು ಶೇಖರಪ್ಪ, ಉಪಾಧ್ಯಕ್ಷರಾಗಿ ಮಿಟ್ಲಕಟ್ಟೆ ಚಂದ್ರಪ್ಪ, ಖಜಾಂಚಿ ಯಾಗಿ ಬಿ. ಚಿದಾನಂದಪ್ಪ, ಸದಸ್ಯರಾಗಿ ಪರಮೇಶ್ವರಗೌಡ್ರು, ನಾಗಪ್ಪ ಇತರರನ್ನು ನೇಮಕ ಮಾಡಲಾಗಿದೆ ಎಂದು ವಿವರಿಸಿದರು.

ತಾಪಂ ಸದಸ್ಯ ಸಿರಿಗೆರೆ ಕೊಟ್ರೇಶಪ್ಪ ಮಾತನಾಡಿ, ಸಮಾಜದ ಪ್ರತಿಯೊಬ್ಬ ವ್ಯಕ್ತಿಗಳ ಹೆಜ್ಜೆಗಳು ಸಹ ವಿಧಾನಸೌಧವನ್ನು ಮುಟ್ಟಿದಾಗ ಸರ್ಕಾರದಿಂದ 2ಎ ಮೀಸಲಾತಿ ಪಡೆಯಲು ಅವಕಾಶ ಸಿಗುತ್ತದೆ. ಎಲ್ಲಾ ಸಮಾಜದವರನ್ನು ಅಪ್ಪಿ ತಬ್ಬಿಕೊಂಡು ಪ್ರೀತಿಯಿಂದ ತೆಗೆದುಕೊಂಡು ಹೋಗುವಂತಹ ಸಮಾಜ ಪಂಚಮಸಾಲಿ ಸಮಾಜ. ಎಲ್ಲಾ ವರ್ಗದವರ ಹಿತ ಬಯಸುವ ಸಮಾಜ, ರಾಜ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ ಪಂಚಮಸಾಲಿ ಸಮಾಜದವರು ಇದ್ದರೂ ಸಹ ಒಮ್ಮತದ ಕೊರತೆಯಿಂದಾಗಿ ಬೆಳವಣಿಗೆ ಕುಂಠಿತವಾಗಿದೆ ಮತ್ತು ಶ್ರೀಗಳು ಸಮಾಜದ ಜನರ ನೋವಿಗೆ ಸ್ಪಂದಿಸುವ ಕೆಲಸ ಮಾಡಬೇಕು.

ಮಿಟ್ಲಕಟ್ಟೆ ಚಂದ್ರಪ್ಪ, ಕೆ. ಶಿವಲಿಂಗಪ್ಪ, ಪರಮೇಶ್ವರಗೌಡ್ರು ಸಿರಿಗೆರೆ, ಕೆ.ಜಿ. ರಾಮು, ಶಿವಕುಮಾರ್ ಸ್ವಾಮಿ ಮಾತನಾಡಿದರು.

ಈ ಸಂದರ್ಭದಲ್ಲಿ ಬಿ.ಚಿದಾನಂದಪ್ಪ, ನಗರ ಸಭೆ ಸದಸ್ಯ ಜಂಬಣ್ಣ, ಜಿಪಂ ಸದಸ್ಯೆ ಹೇಮಾವತಿ, ಶಂಕ್ರಪ್ಪ ದಾವಣಗೆರೆ, ವಿಜಯಕುಮಾರ್ ಮಲೇ ಬೆನ್ನೂರು, ಎ.ಕೆ. ನಾಗಪ್ಪ, ಸುರೇಶ್ ಹಾದಿಮನಿ, ನಾಗಪ್ಪ ಜಿ.ಕೆ. ಬಸಟ್ಟೆಪ್ಪ ಬೇವಿನಹಳ್ಳಿ, ನಿಂಗಪ್ಪ ಭಾನುವಳ್ಳಿ, ಜಿ.ನಂಜಪ್ಪ ರಾಗಿಣಿ ಹರ್ಲಾಪುರ, ಹುಗ್ಗಿ ಅಡಿವೇಶ್, ಶೀಲಾಕುಮಾರಿ, ಬಂಡೇರ್ ತಿಮ್ಮಣ್ಣ, ಬಿ. ಅಲ್ತಾಫ್, ಅಂಗಡಿ ಮಂಜುನಾಥ್, ಅಡಿಕಿ ಕುಮಾರ್, ಲತಾ ಕೊಟ್ರೇಶ್, ಮಂಜುನಾಥ್ ಎನ್, ಕೊಟ್ರೇಶಪ್ಪ, ಕೆ.ಎಸ್. ಜಿ. ನಂಜಪ್ಪ, ಮಲೇಬೆನ್ನೂರು ಬಸವರಾಜ್, ಅಮರಾವತಿ ನಾಗರಾಜ್, ಡಿ. ಉಜ್ಜೇಶ್ ಮತ್ತು ಇತರರು ಹಾಜರಿದ್ದರು.

## ಅ.4 ರಿಂದ ಪದವಿ ತರಗತಿ ಆರಂಭ

**(1ನೇ ಪುಟದಿಂದ)** ಚಟವಟಿಕೆಗಳಲ್ಲಿ ವ್ಯತ್ಯಯವಾಗಿದ್ದ ಹಿನ್ನೆಲೆಯಲ್ಲಿ ಆ ಎಲ್ಲ ಅಂಶಗಳನ್ನು ಪರಿಗಣಿಸಿ ಶೈಕ್ಷಣಿಕ ಕ್ಯಾಲೆಂಡರ್ ನ ಕರಡು ರೂಪಿಸಲಾಗಿದೆ ಎಂದರು.

**ಪದವಿ ತರಗತಿಗಳು:** ಪದವಿ ವಿಭಾಗದ 5ನೇ ಸೆಮಿಸ್ಟರ್ ತರಗತಿಗಳು ಫೆಬ್ರವರಿ 28ರಂದು ಮುಗಿಯಲಿದ್ದು, ಪರೀಕ್ಷೆಗಳು 2021 ಮಾರ್ಚ್ 31ರಂದು ಮುಗಿಯಲಿವೆ. 1 ಮತ್ತು 3ನೇ ಸೆಮಿಸ್ಟರ್ ತರಗತಿಗಳು 2021ರ ಮಾರ್ಚ್ 31ಕ್ಕೆ ಅಂತ್ಯವಾಗಲಿದ್ದು, ಪರೀಕ್ಷೆಗಳು 2021 ಏಪ್ರಿಲ್ 30ರಂದು ಆರಂಭವಾಗಲಿವೆ. 6ನೇ ಸೆಮಿಸ್ಟರ್ ತರಗತಿಗಳು 2021 ಏಪ್ರಿಲ್ 1ರಂದು ಶುರುವಾಗಿ, 2021ರ ಜುಲೈ 31ಕ್ಕೆ ಮುಗಿಯುತ್ತವೆ. 6ನೇ ಸೆಮಿಸ್ಟರ್ ಪರೀಕ್ಷೆಗಳು 2021 ಆಗಸ್ಟ್ 31ಕ್ಕೆ ಮುಗಿಯುತ್ತವೆ. ಈ ಸೆಮಿಸ್ಟರ್ ಪರೀಕ್ಷೆ ಫಲಿತಾಂಶವು 2021 ನೇ ಸೆಪ್ಟೆಂಬರ್ 10ರಂದು ಪ್ರಕಟವಾಗಲಿದೆ. 2 ಮತ್ತು 4ನೇ ಸೆಮಿಸ್ಟರ್ ತರಗತಿಗಳು 2021 ಮೇ 2ಕ್ಕೆ ಶುರುವಾಗಿ 2021 ಆಗಸ್ಟ್ 31ಕ್ಕೆ ಮುಕ್ತಾಯವಾಗುತ್ತವೆ. ಈ ಸೆಮಿಸ್ಟರ್‌ನ ಪರೀಕ್ಷೆಗಳು 2021 ಸೆಪ್ಟೆಂಬರ್ 30ಕ್ಕೆ ಮುಗಿಯುತ್ತವೆ.

ಪದವಿ ವಿಭಾಗದ 1, 3, 5ನೇ ಸೆಮಿಸ್ಟರ್ ತರಗತಿಗಳು 2021 ಅಕ್ಟೋಬರ್ 4ಕ್ಕೆ ಆರಂಭವಾಗುತ್ತವೆ. 2022 ಜನವರಿ 31ಕ್ಕೆ ಮುಕ್ತಾಯವಾಗುತ್ತವೆ. ಪರೀಕ್ಷೆಗಳು 2022ರ ಫೆಬ್ರವರಿ 28ಕ್ಕೆ ಮುಗಿಯಲಿದೆ. 2, 4, 6ನೇ ಸೆಮಿಸ್ಟರ್ ತರಗತಿಗಳು 2022ರ ಮಾರ್ಚ್ 1ರಂದು ಶುರುವಾಗಿ, 2022ರ ಜೂನ್ 30ಕ್ಕೆ ತರಗತಿಗಳು ಮುಗಿಯುತ್ತವೆ. ಪರೀಕ್ಷೆಗಳು 2022ರ ಜುಲೈ 31ಕ್ಕೆ ಮುಗಿಯಲಿದ್ದು, ಫಲಿತಾಂಶವು 2022 ಆಗಸ್ಟ್ 14ರಂದು ಪ್ರಕಟವಾಗುತ್ತದೆ.

**ಎಂಜಿನಿಯರಿಂಗ್ ತರಗತಿಗಳು:** ಎಂಜಿನಿಯರಿಂಗ್ ವಿಭಾಗದ 7ನೇ ಸೆಮಿಸ್ಟರ್ ತರಗತಿಗಳು 2021 ಫೆಬ್ರವರಿ 28ಕ್ಕೆ ಮುಗಿಯುತ್ತವೆ. ಪರೀಕ್ಷೆಗಳು 2021 ಮಾರ್ಚ್ 31ರಂದು ಮುಗಿಯಲಿವೆ. 1, 3 ಮತ್ತು 5ನೇ ಸೆಮಿಸ್ಟರ್ ತರಗತಿಗಳು 2021 ಮಾರ್ಚ್ 31ಕ್ಕೆ ಮುಗಿಯಲಿವೆ. ಪರೀಕ್ಷೆಗಳು 2021 ಏಪ್ರಿಲ್ 31ಕ್ಕೆ ಅಂತ್ಯವಾಗುತ್ತವೆ. 8ನೇ ಸೆಮಿಸ್ಟರ್ ತರಗತಿಗಳು 2021 ಏಪ್ರಿಲ್ 1ರಂದು ಶುರುವಾಗಿ, 2021 ಜುಲೈ 31ಕ್ಕೆ ಮುಗಿಯುತ್ತವೆ. ಪರೀಕ್ಷೆಗಳು 2021 ಆಗಸ್ಟ್ 31ಕ್ಕೆ ಮುಗಿದು ಫಲಿತಾಂಶವು 2021ರ ಸೆಪ್ಟೆಂಬರ್ 10ರಂದು ಪ್ರಕಟವಾಗಲಿದೆ. 2,4 ಮತ್ತು 6ನೇ ಸೆಮಿಸ್ಟರ್ ತರಗತಿಗಳು 2021ರ ಮೇ 2ರಂದು ಆರಂಭವಾಗಿ, 2021ರ ಆಗಸ್ಟ್ 31ಕ್ಕೆ ಮುಗಿಯಲಿವೆ. ಪರೀಕ್ಷೆಗಳು 2021ರ ಸೆಪ್ಟೆಂಬರ್ 31ಕ್ಕೆ ಮುಗಿಯುತ್ತವೆ.

ಎಂಜಿನಿಯರಿಂಗ್ ವಿಭಾಗದ 1,3,5,7ನೇ ಸೆಮಿಸ್ಟರ್ ತರಗತಿಗಳು 2021ರ ಅಕ್ಟೋಬರ್ 4ರಂದು ಆರಂಭವಾಗಲಿವೆ. ಈ ತರಗತಿಗಳು 2022 ಜನವರಿ 31ಕ್ಕೆ ಅಂತ್ಯವಾಗಲಿದ್ದು, 2022 ಫೆಬ್ರವರಿ 28ಕ್ಕೆ ಪರೀಕ್ಷೆಗಳು ಮುಗಿಯಲಿವೆ. ಇನ್ನು 2,4,6,8ನೇ ಸೆಮಿಸ್ಟರ್‌ನ ತರಗತಿಗಳು 2022 ಮಾರ್ಚ್ 1ರಂದು ಆರಂಭವಾಗಲಿದ್ದು, 2022 ಜೂನ್ 30ಕ್ಕೆ ತರಗತಿಗಳು ಕೊನೆಗೊಳ್ಳಲಿವೆ. ಈ ಸೆಮಿಸ್ಟರ್‌ಗಳ ಪರೀಕ್ಷೆಗಳು 2022 ಜುಲೈ 31ಕ್ಕೆ ಅಂತ್ಯವಾಗಲಿದ್ದು, 2022 ಆಗಸ್ಟ್ 14ರಂದು ಫಲಿತಾಂಶ ಪ್ರಕಟವಾಗಲಿದೆ.

**ಸ್ನಾತಕೋತ್ತರ ತರಗತಿಗಳು:** 3ನೇ ಸೆಮಿಸ್ಟರ್ ತರಗತಿಗಳು 2021 ಫೆಬ್ರವರಿ 28ಕ್ಕೆ ಮುಗಿಯಲಿದ್ದು, ಇದರ ಪರೀಕ್ಷೆಗಳು 2021ರ ಮಾರ್ಚ್ 31ಕ್ಕೆ ಅಂತ್ಯವಾಗಲಿವೆ. 1ನೇ ಸೆಮಿಸ್ಟರ್ ತರಗತಿಗಳು 2021 ಏಪ್ರಿಲ್ 1ಕ್ಕೆ ಮುಗಿದು, ಪರೀಕ್ಷೆಗಳು 2021ರ ಮಾರ್ಚ್ 31ಕ್ಕೆ ಅಂತ್ಯವಾಗಲಿವೆ. 4ನೇ ಸೆಮಿಸ್ಟರ್ ತರಗತಿಗಳು 2021 ಏಪ್ರಿಲ್ 1ರಿಂದ ಆರಂಭವಾಗಿ 2021 ಜುಲೈ 31ಕ್ಕೆ ಮುಗಿಯಲಿವೆ. ಈ ಸೆಮಿಸ್ಟರ್‌ನ ಪರೀಕ್ಷೆಗಳು 2021 ಆಗಸ್ಟ್ 31ಕ್ಕೆ ಆರಂಭವಾಗಿ ಪರೀಕ್ಷೆ ಫಲಿತಾಂಶವು 2021ರ ಸೆಪ್ಟೆಂಬರ್ 10ರಂದು ಪ್ರಕಟವಾಗಲಿದೆ. 2ನೇ ಸೆಮಿಸ್ಟರ್‌ನ ತರಗತಿಗಳು 2021 ಮೇ 2ರಿಂದ ಆರಂಭವಾಗಿ 2021 ಆಗಸ್ಟ್ 31ಕ್ಕೆ ಮುಗಿಯುತ್ತವೆ ಹಾಗೂ ಈ ಪರೀಕ್ಷೆಗಳಫಲಿತಾಂಶವು 2021ರ ಸೆಪ್ಟೆಂಬರ್ 30ರಂದು ಪ್ರಕಟವಾಗಲಿದೆ.

1-3ನೇ ಸೆಮಿಸ್ಟರ್‌ಗಳ ತರಗತಿಗಳು (ಕಾಲೇಜುಗಳು) 2021 ಅಕ್ಟೋಬರ್ 4ರಂದು ಆರಂಭವಾಗುತ್ತವೆ. ಈ ಮೂರು ಸೆಮಿಸ್ಟರ್‌ಗಳ ತರಗತಿಗಳು 2022 ಜನವರಿ 31ಕ್ಕೆ ಅಂತ್ಯವಾಗಲಿವೆ. 2022 ಫೆಬ್ರವರಿ 28ಕ್ಕೆಲ್ಲ ಈ ಸೆಮಿಸ್ಟರ್‌ಗಳ ಪರೀಕ್ಷೆಗಳು ಮುಗಿಯಲಿವೆ. 2 ಮತ್ತು 4ನೇ ಸೆಮಿಸ್ಟರ್ ತರಗತಿಗಳು 2022 ಮಾರ್ಚ್ 1ರಿಂದ ಆರಂಭವಾಗಿ 2022 ಜೂನ್ 22ಕ್ಕೆ ಅಂತ್ಯವಾಗಲಿವೆ. 2ರಿಂದ 4ನೇ ಸೆಮಿಸ್ಟರ್ ಪರೀಕ್ಷೆಗಳು 2022 ಜುಲೈ 31ರಿಂದ ಶುರುವಾಗಲಿವೆ. ಈ ಪರೀಕ್ಷೆಗಳ ಫಲಿತಾಂಶ 2022 ಅಗಸ್ಟ್ 14ರಂದು ಪ್ರಕಟವಾಗಲಿದೆ.

# ದೆಹಲಿ ರೈತರ ಹೋರಾಟ ಬೆಂಬಲಿಸಿ ರೈತರ ಟ್ರ್ಯಾಕ್ಟರ್-ಬೈಕ್ ರ್‍ಯಾಲಿ

ದಾವಣಗೆರೆ, ಜ.19- ದೆಹಲಿಯಲ್ಲಿ ನಡೆಸುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಿ ರೈತ - ದಲಿತ - ಕಾರ್ಮಿಕ ಐಕ್ಯ ಹೋರಾಟ ಸಮಿತಿ ನೇತೃತ್ವದಲ್ಲಿ ಇದೇ ದಿನಾಂಕ 26ರ ಗಣರಾಜ್ಯೋತ್ಸವದಂದು ಬೆಂಗಳೂರಿನಲ್ಲಿ ರೈತರು ಟ್ರ್ಯಾಕ್ಟರ್-ಬೈಕ್ ರ್‍ಯಾಲಿ ಪರೇಡ್ ನಡೆಸಲಿದ್ದಾರೆ.

ರೈತ ಕುಲವನ್ನೇ ನಾಶಪಡಿಸಬಹುದಾದ ಕಾನೂನುಗಳನ್ನು ಜಾರಿಗೆ ತಂದು ಕೇಂದ್ರ ಸರ್ಕಾರ ರೈತರ ಮರಣ ಶಾಸನ ಬರೆದಿದ್ದು, ರೈತ ವಿರೋಧಿ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯುವಂತೆ ದೆಹಲಿಯಲ್ಲಿ 53 ದಿನಗಳಿಂದ ರೈತರು ಹೋರಾಟ ನಡೆಸುತ್ತಿದ್ದರೂ ಕೇಂದ್ರ ಸರ್ಕಾರ ಗಮನ ಹರಿಸದೇ ನಾಟಕೀಯವಾಗಿ ವರ್ತಿಸುತ್ತಿದೆ ಎಂದು ರೈತ - ದಲಿತ - ಕಾರ್ಮಿಕ ಐಕ್ಯ ಹೋರಾಟದ ಕೋರ್ ಕಮಿಟಿ ಮುಖಂಡ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ಪತ್ರಿಕಾಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ಅದಾನಿ, ಅಂಬಾನಿ ಕಂಪೆನಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ವಿಮಾನಯಾನ, ರೈಲ್ವೆ, ಕಲ್ಲಿದ್ದಲು ಸರ್ಕಾರಿ ಸ್ವಾಮ್ಯವನ್ನು ಖಾಸಗಿಗೆ ಮಾರಾಟ ಮಾಡುವುದಲ್ಲದೇ ಕೃಷಿ ಕ್ಷೇತ್ರವನ್ನು ಸಹ ಈ ಕಂಪೆನಿಗೆ ಒಪ್ಪಿಸಿ ರೈತರನ್ನು ಕೂಲಿ ಕೆಲಸಗಾರರನ್ನಾಗಿ ಮಾಡಲು ವಾಮ ಮಾರ್ಗ ಅನುಸರಿಸುತ್ತಿದೆ ಎಂದು ದೂರಿದರು.

ಕೇಂದ್ರ ಸರ್ಕಾರದ ಕಾಯ್ದೆಗಳಿಂದ ಬೆಲೆ ನಿಗದಿ ಮಾಡುವ ಮಾನದಂಡವೂ ತಪ್ಪಿ ಹೋಗಿ ಖಾಸಗಿ ಉದ್ಯಮಿಗಳ ಮಾಲೀಕತ್ವದ ಕಂಪನಿಗಳು ತಮಗೆ ಇಚ್ಛೆ ಬಂದ ಬೆಲೆ ನಿಗದಿ ಮಾಡುವಂತಾಗುತ್ತದೆ. ಆಗ ರೈತರು ಅನಿವಾರ್ಯವಾಗಿ ಸಂಕಷ್ಟಕ್ಕೆ ಸಿಲುಕಬೇಕಾ ಗುತ್ತದೆ. ಈ ಬಗ್ಗೆ ರೈತರು ಜಾಗೃತರಾಗಬೇಕು. ಹೋರಾಟಕ್ಕೆ ಬೆಂಬಲಿಸುವಂತೆ ಮನವಿ ಮಾಡಿದರು.

**ರೈತರ ಬಗ್ಗೆ ಹಗುರ ಮಾತಾಡಿದರೆ ದಾವೆ :** ರೈತ ಮುಖಂಡ ಬಲ್ಲೂರು ರವಿ ಕುಮಾರ್ ಮಾತನಾಡಿ, ದೆಹಲಿಯಲ್ಲಿ ಹೋ ರಾಟ ನಡೆಸುತ್ತಿರುವ ರೈತರು ಏಜೆಂಟ್‌ಗ ಳೆಂದು ಕೃಷಿ ಸಚಿವ ಬಿ.ಸಿ. ಪಾಟೀಲ್, ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಹೇಳು ತ್ತಾರೆ. ಅವರದ್ದೇ ಕೇಂದ್ರ ಸರ್ಕಾರ ರೈತರನ್ನು ಮಾತುಕತೆಗೆ ಕರೆಯುತ್ತಿದೆ. ಹಾಗಿದ್ದರೆ ರೈತರು ಏಜೆಂಟ್‌ಗಳಾದರೆ ಮಾತುಕತೆಗೆ ಸರ್ಕಾರವೇಕೆ ಕರೆಯಬೇಕು. ಇಂತಹ ಹೇಳಿಕೆಗಳನ್ನು ನೀಡುವ ಈ ನಾಯಕರು ರೈತ ಹೋರಾಟವನ್ನು ದಿಕ್ಕು ತಪ್ಪಿಸುವ ಹುನ್ನಾರ ನಡೆಸುತ್ತಿದ್ದಾರೆ. ಇದೇ ರೀತಿ ರೈತರ ಬಗ್ಗೆ ಮಾತನಾಡುತ್ತಿದ್ದರೆ ನಾವುಗಳು ನ್ಯಾಯಾಲಯದಲ್ಲಿ ಅವರ ವಿರುದ್ಧ ದಾವೆ ಹೂಡುವುದಾಗಿ ಎಚ್ಚರಿಕೆ ನೀಡಿದರು.

**ಕನಿಷ್ಠ ಬೆಂಬಲ ಬೆಲೆ ಜಾರಿ ಮಾಡಿ:** ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ ಮಾತನಾಡಿ, ಕನಿಷ್ಠ ಬೆಂಬಲ ಬೆಲೆ ಘೋಷಿ ಸುವುದಾಗಿ ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು, ಆ ಕಾಯ್ದೆ ಜಾರಿ ತರಲು ಮುಂದಾಗುತ್ತಿಲ್ಲ. ಈ ಕಾಯ್ದೆ ಜಾರಿಗೊಳಿ ಸಲು ಆದ್ಯತೆ ನೀಡುವಂತೆ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡ ರಾದ ಹೊನ್ನೂರು ಮುನಿಯಪ್ಪ, ಕಾರ್ಮಿಕ ಮುಖಂಡ ಹೆಚ್.ಜಿ. ಉಮೇಶ್, ಐರಣಿ ಚಂದ್ರು, ಅಂಜಿನಪ್ಪ ಪೂಜಾರ್ ನಿಟುವಳ್ಳಿ, ದೇವ ಕುಮಾರ್, ಅತ್ತಹಳ್ಳಿ ದೇವರಾಜ್, ಜಯನಾಯಕ, ರಾಂಪುರ ಬಸವರಾಜ್, ಇಟಗಿ ಬಸವರಾಜಪ್ಪ, ಕೋಲ್ಕುಂಟೆ ಬಸಣ್ಣ ಸೇರಿದಂತೆ ಇತರರಿದ್ದರು.

### ಬಹಿರಂಗ ಚರ್ಚೆಗೆ ಆಹ್ವಾನ

ಕೇಂದ್ರ ಸರ್ಕಾರ ರೈತ ವಿರೋಧಿ ಕಾಯ್ದೆಗಳನ್ನು ಸುಗ್ರೀವಾಜ್ಞೆಗಳ ಮೂಲಕ ಜಾರಿಗೆ ತಂದಿದೆ. ಅದನ್ನು ಸರಿ ಎಂದು ಹೇಳುವ ಯಾರೇ ಆಗಲಿ ಅವರು ಪ್ರಧಾನಿ ಮೋದಿ ಕರೆದುಕೊಂಡು ಚರ್ಚೆಗೆ ಬಂದಲ್ಲಿ ನಾವು ತಿದ್ದುಪಡಿ ಕಾಯ್ದೆಗಳ ಮಾರಕ ಹೇಗೆಂದು ದೃಢಪಡಿಸಲು ಚರ್ಚೆಗೆ ಸಿದ್ಧರಿದ್ದೇವೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಸವಾಲು ಹಾಕಿದರು.

ನಗರದ ಜಯದೇವ ವೃತ್ತದಲ್ಲಿ ಬಹಿ ರಂಗವಾಗಿ ಚರ್ಚೆಗೆ ಬರುವಂತೆ ಆಹ್ವಾನ ನೀಡುತ್ತಾ, ಹೀಗೆ ಚರ್ಚೆಗೆ ಬರುವಾಗ ರೈತನಿಗೆ ಹೇಗೆ ಈ ಕಾಯ್ದೆಗಳು ಪೂರಕ ಆಗುತ್ತವೆ ಎನ್ನುವ ವಿಷಯವಿಟ್ಟುಕೊಂಡು ಬರಬೇಕು. ನಾವುಗಳು ಕಾಯ್ದೆಗಳು ಮಾರಕ ದೃಢಪಡಿಸುತ್ತೇವೆ. ನಾವು ಸುಧಾರಣೆ ವಿರೋಧಿಗಳಲ್ಲ. ಆದರೆ, ಈ ಕಾಯ್ದೆಗಳನ್ನು ತರುವ ಮೂಲಕ ರೈತರನ್ನು ಸಂಕಷ್ಟಕ್ಕೆ ಸಿಲುಕಿಸುವ ಕೆಲಸ ನಡೆಯು ತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಆದಾಯ ದ್ವಿಗುಣ ಮಾಡುವ ಬಗ್ಗೆ ಮಾತನಾಡುತ್ತಾರೆ. ಆದರೆ, ರೈತರ ಜಾಗ ದಲ್ಲಿ ಉದ್ಯಮಿಗಳ ಆದಾಯ ದ್ವಿಗುಣ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಕೇಂದ್ರ ಸರ್ಕಾರದ ತಿದ್ದುಪಡಿ ಕಾಯ್ದೆಗಳನ್ನು ಮೆಚ್ಚುವಂತವರಿಗೆ ಆ ಕಾಯ್ದೆಗಳೇ ಇರಲಿ. ಇದು ಬೇಡ ಎನ್ನುತ್ತಿರುವ ರೈತರಿಗೆ ಕನಿಷ್ಠ ಬೆಂಬಲ ಬೆಲೆ ನೀಡಲಿ ಎಂದರು.

> ಕೊರೊನಾ ವೈರಸ್ ಭೀತಿ ಉಂಟು ಮಾಡಿ ರೈತರನ್ನು ಮನೆಯಲ್ಲಿ ಕೂರಿಸಿ ಕೇಂದ್ರ ಸರ್ಕಾರ ರೈತ ವಿರೋಧ ಕಾಯ್ದೆಗಳನ್ನು ಸುಗ್ರೀವಾಜ್ಞೆಗಳ ಮೂಲಕ ಯಾವುದೇ ಚರ್ಚೆ ಇಲ್ಲದೇ ಜಾರಿಗೆ ತಂದು ಜನತಂತ್ರ ವ್ಯವಸ್ಥೆಗೆ ಅಪಮಾನ ಮಾಡಿದೆ.
>
> **-ಕುರುಬೂರ್ ಶಾಂತಕುಮಾರ್**, ಅಧ್ಯಕ್ಷರು, ರಾಜ್ಯ ಕಬ್ಬು ಬೆಳೆಗಾರರ ಸಂಘ

## ಭೋಸ್ ಜನ್ಮದಿನ ಪರಾಕ್ರಮ ದಿನವಾಗಿ ಆಚರಣೆ



ನವದೆಹಲಿ, ಜ. 19 – ನೇತಾಜಿ ಸುಭಾಷ್ ಚಂದ್ರ ಭೋಸ್ ಅವರ ಜನ್ಮದಿನವಾದ ಜನವರಿ 23 ಅನ್ನು 'ಪರಾಕ್ರಮ ದಿನ'ವನ್ನಾಗಿ ಆಚರಿಸಲಾಗುವುದು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ತಿಳಿಸಿದ್ದಾರೆ.

ಭೋಸ್ ಅವರ 125ನೇ ಜನ್ಮ ದಿನಾಚರಣೆ ಜನವರಿ 23ರಂದು ಬರಲಿದೆ. ಅದು ಕೊಲ್ಕೊತಾದಲ್ಲಿ ನಡೆಯಲಿರುವ ಮೊದಲ ಪರಾಕ್ರಮ್ ದಿವಸ್ ಆಚರಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ ಎಂದು ಪಟೇಲ್ ಹೇಳಿದ್ದಾರೆ.

ಆ ದಿನದಂದು ಭೋಸ್ ರಚಿಸಿದ್ದ ಇಂಡಿಯನ್ ನ್ಯಾಷನಲ್ ಆರ್ಮಿಯ ಪ್ರಮುಖ ಸದಸ್ಯರನ್ನು ಹಾಗೂ ಅವರ ಕುಟುಂಬದ ಸದಸ್ಯರನ್ನು ಕೊಲ್ಕೊತಾದಲ್ಲಿ ಗೌರವಿಸಲಾಗುವುದು. ಅದೇ ದಿನದಂದು ಪಶ್ಚಿಮ ಬಂಗಾಳದ 200 ಪಟುವಾ ಕಲಾವಿದರು ಬೋಸ್ ಜೀವನ ಚರಿತ್ರೆ ಬಿಂಬಿಸುವ 400 ಮೀಟರ್ ಉದ್ದದ ಚಿತ್ರಗಳನ್ನು ರಚಿಸಲಿದ್ದಾರೆ. ಬೋಸ್ ಅವರು ಜನಿಸಿದ್ದ ಒಡಿಶಾದ ಕಟಕ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಭಾಗವಹಿಸಲಿದ್ದಾರೆ.

## ಹೊಸಷರತ್ತು ಕೈ ಬಿಡಲು ಕೇಂದ್ರ ತಾಕೀತು

**(3ನೇ ಪುಟದಿಂದ)** ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಸಚಿವಾಲಯ ಹೇಳಿದೆ. ವಾಟ್ಸ್‌ಆಪ್ ನೂತನ ನೀತಿಯ ಬಗ್ಗೆ ತೀವ್ರ ಆಕ್ಷೇಪಗಳು ಕೇಳಿ ಬಂದಿದ್ದವು. ಈ ಹಿನ್ನೆಲೆಯಲ್ಲಿ ವಾಟ್ಸ್‌ಅಪ್ ತನ್ನ ನೀತಿ ಜಾರಿಯನ್ನು ಜನವರಿ 16ರಂದು ಮುಂದೂಡಿತ್ತು. ವಾಟ್ಸ್‌ಅಪ್ ಭಾರತದದಲ್ಲಿ 40 ಕೋಟಿ ಬಳಕೆದಾರರನ್ನು ಹೊಂದಿದೆ. ಇದು ವಿಶ್ವದಲ್ಲೇ ಅತಿ ಹೆಚ್ಚಿನ ಸಂಖ್ಯೆಯಾಗಿದೆ.

## ಹೆಚ್.ಎನ್.ಮಯೂರ್‌ಗೆ ಪ್ರಶಸ್ತಿ



ದಾವಣಗೆರೆ, ಜ.19- ಇಂಡಿಯನ್ ಸಿಮೆಂಟ್ ಸಂಸ್ಥೆ (ಹುಬ್ಬಳ್ಳಿ-ಧಾರವಾಡ ಕೇಂದ್ರ)ಯ ವತಿಯಿಂದ ಕೊಡಲ್ಪಡುವ 'ಐಸಿಐ - ಅಲ್ಟ್ರಾಟೆಕ್ ಪ್ರಶಸ್ತಿ-2020' ಪುರಸ್ಕಾರಕ್ಕೆ ನಗರದ ವಸತಿ ಕಟ್ಟಡದ ಅಭಿಯಂತರರಾದ ಮಯೂರ್ ಕನ್ಸಲ್ಟೆನ್ಸಿ ಸರ್ವೀಸ್ ನ ಹೆಚ್.ಎನ್. ಮಯೂರ್ ಅವರು ಭಾಜನರಾಗಿದ್ದಾರೆ. ಅವರಿಗೆ ಡಾ. ಎನ್.ಜಿ.ಸಜ್ಜನ್ ಹಾಗೂ ಡಾ. ವಸಂತಿ ಅಜಯ್ ವಸತಿ ಕಟ್ಟಡದ ಸಲಹೆಗಾರರಾಗಿದ್ದರು.

## ಇಂದಿನಿಂದ ಉಪ್ಪಾರರ ವಿಚಾರ ಸಂಕೀರಣ

ದಾವಣಗೆರೆ, ಜ.19- ಉಪ್ಪಾರರ ಕುಲಶಾಸ್ತ್ರೀಯ ಅಧ್ಯಯನ, ಉಪ್ಪಾರರ ವಿಚಾರ ಸಂಕಿರಣ ಕಾರ್ಯಾಗಾರವನ್ನು ನಾಳೆ ದಿನಾಂಕ 20 ರಿಂದ 24ರವರೆಗೆ ಹೊಸದುರ್ಗ ಬ್ರಹ್ಮವಿದ್ಯಾನಗರದ ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನ ಭಗೀರಥ ಪೀಠದ ಸಹಯೋಗದೊಂದಿಗೆ ಶ್ರೀಮಠದಲ್ಲಿ ಸಂಘಟಿಸಲಾಗಿದೆ ಎಂದು ಜಿಲ್ಲಾ ಭಗೀರಥ ಉಪ್ಪಾರ ಸಂಘ ಹಾಗೂ ತಾಲ್ಲೂಕು ಸಂಘದ ಅಧ್ಯಕ್ಷ ಎನ್.ಬಿ.ಎ. ಲೋಕೇಶ್ ತಿಳಿಸಿದ್ದಾರೆ.

ಉಪ್ಪಾರ ಸಮುದಾಯವನ್ನು ಎಸ್ ಟಿ ಪಟ್ಟಿಗೆ ಸೇರ್ಪಡೆ ಮಾಡಬೇಕೆಂಬ ಬೇಡಿಕೆ ಹಿನ್ನೆಲೆಯಲ್ಲಿ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ ಪ್ರಾಯೋಜಿತ ಉಪ್ಪಾರ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ವನ್ನು ಕನ್ನಡ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮೂಲಕ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಉಪ್ಪಾರರು ಹೆಚ್ಚು ವಾಸವಿರುವ ಆಯ್ದ ನೆಲೆಗಳ ಕೌಟುಂಬಿಕ ಸಮೀಕ್ಷಾ ಕಾರ್ಯವು ಆನ್ ಲೈನ್ ಮೂಲಕ ಮಾಹಿತಿ ಸಂಗ್ರಹಿಸುವ ಮೂಲಕ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ನಮ್ಮ ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಪ್ರಮುಖವಾಗಿ ವಿಶಿಷ್ಟ ಬಗೆಯ ಸಂಸ್ಕೃತಿ, ಭೌಗೋಳಿಕ ಪ್ರತ್ಯೇಕತೆ, ಸಂಕೋಚ ಅಥವಾ ನಾಚಿಕೆ ಸ್ವಭಾವ, ಸಾಮಾಜೋ-ಆರ್ಥಿಕ ಹಿಂಬೀಳು ವಿಕೆ, ಅಸ್ಪೃಶ್ಯತೆ ಅಂಶಗಳನ್ನು ಒಳಗೊಂಡಿರಬೇಕಾಗಿರು ವುದರಿಂದ ಇವುಗಳನ್ನೊಳಗೊಂಡಂತೆ ಉಪ್ಪಾರರ ಪ್ರಬಂಧಗಳನ್ನು ಮಂಡಿಸಬೇಕು. ವಿವರಕ್ಕೆ ಸಂಪರ್ಕಿಸಿ : 9900337633, 9448632685, 9482053489.

## ತಾಲ್ಲೂಕು ಪಂಚಾಯ್ತಿ ಸಭೆ ಮುಂದೂಡಿಕೆ

ದಾವಣಗೆರೆ ತಾಲ್ಲೂಕು ಪಂಚಾಯ್ತಿಯಲ್ಲಿ ಇಂದು ನಡೆಯಬೇಕಿದ್ದ ಸಾಮಾನ್ಯ ಸಭೆಯನ್ನು ಕಾರಣಾಂತರ ಗಳಿಂದ ಮುಂದೂಡಲಾಗಿದೆ ಎಂದು ಕಾರ್ಯ ನಿರ್ವಾಹಕ ಅಧಿಕಾರಿ ಬಿ.ಎಂ. ದಾರುಕೇಶ್ ತಿಳಿಸಿದ್ದಾರೆ.


## ಹೃದಯಪೂರ್ವಕ ಕೃತಜ್ಞತೆಗಳು

ದಿನಾಂಕ 17.01.2021ರಂದು ನಡೆದ ಜಂಗಮ ಸೌಹಾರ್ದ ಸಹಕಾರಿ ನಿಯಮಿತದ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಮಗೆ ಪ್ರಾಮಾಣಿಕವಾಗಿ ಮತ ನೀಡಿದ ಎಲ್ಲಾ ಸಹಕಾರಿಯ ಸದಸ್ಯರ ಬಾಂಧವರಿಗೂ ಹೃದಯಪೂರ್ವಕ ಕೃತಜ್ಞತೆಗಳು. ಚುನಾವಣೆ ಸಂದರ್ಭದಲ್ಲಿ ಸಹಕಾರ ನೀಡಿದ ಸಹಕಾರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.



ರಾಜಶೇಖರಯ್ಯ ಪಿ.ಜಿ. ಚನ್ನಬಸವಯ್ಯ ಕೆ.ಎಂ. ದ್ರಾಕ್ಷಾಯಣಮ್ಮ ವೀರಭದ್ರಯ್ಯ ಶಾಸ್ತ್ರಿ ಹೆಚ್. ವೀರರಾಜೇಂದ್ರಸ್ವಾಮಿ ಬಿ.ಎಂ.



ಸುರೇಶ್ ಹೆಚ್.ಪಿ. ಚಂದ್ರಮ್ಮ ಕೆ.ಎಂ. ಕಿರಣಕುಮಾರ್ ಜೆ. ಸಿದ್ದಯ್ಯ ಎಂ.ಎಸ್. (ಸಿದ್ದಯ್ಯ ಕೋಟೆಹಾಳ್) ಅರುಣಕುಮಾರ್ ಜೆ.ಕೆ.

## ಮಹಾರಾಷ್ಟ್ರ ಗಡಿ ವಿವಾದ ಮುಗಿದ ಅಧ್ಯಾಯ



ಬೆಂಗಳೂರು, ಜ.19- ಮಹಾರಾಷ್ಟ್ರ ಗಡಿ ವಿವಾದ ಮುಗಿದ ಅಧ್ಯಾಯ. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿಯ ರೇಖೆ ಈಗಾಗಲೇ ನಿಗದಿಯಾಗಿದೆ. ನಕ್ಷೆ ಕೂಡ ಇದೆ. ಅದರಲ್ಲಿ ಒಂದಿಂಚು ಕೂಡ ಅದಲು-ಬದಲು ಆಗುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿಕೆ ಖಂಡನೀಯ, ಎರಡೂ ರಾಜ್ಯಗಳ ನಕ್ಷೆ ರಾಜ್ಯ ವಿಂಗಡಣೆ ವೇಳೆಯೇ ನಿಗದಿಯಾಗಿದೆ, ಅದರಲ್ಲಿ ಮತ್ತೆ ಯಾವುದೇ ಬದಲಾವಣೆ ಇಲ್ಲ ಎಂದರು.

ಮರಾಠಿಗರು ನಮ್ಮವರೇ, ಕನ್ನಡ ನಾಡಿನಲ್ಲೇ ಹುಟ್ಟಿ ಬೆಳೆದು ಕನ್ನಡ ಮಾತನಾಡುವ ಮರಾಠಿಗರಿಗೆ ನಾವು ಸಹಾಯ ಮಾಡಬೇಕು, ರಾಜಕೀಯ ಇರಬಾರದು ಎಂದರು.

## ಜನರ ಮನೆ ಬಾಗಿಲಿಗೆ ಸೌಲಭ್ಯ ಜನಸೇವಕ್ ಉದ್ದೇಶ

ಬೆಂಗಳೂರು, ಜ.19 - ನಾಗರಿಕರ ಮನೆ ಬಾಗಿಲಿಗೆ ಸಾರ್ವಜನಿಕ ಸೌಲಭ್ಯಗಳನ್ನು ತಲುಪಿಸುವುದು ಜನಸೇವಕ್ ಯೋಜನೆಯ ಉದ್ದೇಶವಾಗಿದ್ದು, ಸಾರ್ವಜನಿಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶ್ ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಜನಸೇವಕ ಯೋಜನೆಗೆ ಮರುಚಾಲನೆ ನೀಡಿ ಮಾತನಾಡಿದ ಅವರು, ಬಿಬಿಎಂಪಿ, ಕಂದಾಯ ಇಲಾಖೆ, ಸಾರಿಗೆ ಇಲಾಖೆ ಸೇರಿದಂತೆ 55 ಸೇವೆಗಳನ್ನು ಜನಸೇವಕ ಯೋಜನೆ ಮೂಲಕ ನಾಗರಿಕರ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ ಎಂದರು.

ಈ ಸೇವೆಗಳಲ್ಲಿ ಆಧಾರ್ ಕಾರ್ಡ್ ನ್ಯೂನತೆ ಸರಿಪಡಿಸುವುದು, ಹಿರಿಯ ನಾಗರಿಕರು ಮತ್ತು ಸರ್ಕಾರಿ ಕೆಲಸಗಳಿಗಾಗಿ ಕರ್ತವ್ಯಕ್ಕೆ ರಜೆ ಹಾಕಿ ಕಚೇರಿಗಳಿಗೆ ಅಡ್ಡಾಡುವುದನ್ನು ತಪ್ಪಿಸಲು ಮತ್ತು ವಿಶೇಷವಾಗಿ ಮಧ್ಯವರ್ತಿಗಳ ಹಾವಳಿಯಿಂದ ಮುಕ್ತಿಗೊಳಿಸಿ, ನೇರವಾಗಿ ಫಲಾನುಭವಿಗಳಿಗೆ ಸರ್ಕಾರಿ ಸೇವೆಗಳನ್ನು ಒದಗಿಸಲು ಈ ಯೋಜನೆ ಸಹಕಾರಿಯಾಗಿದೆ ಎಂದವರು ಹೇಳಿದ್ದಾರೆ.

ಇನ್ನು ಕೆಲವೇ ತಿಂಗಳಲ್ಲಿ ಜನಸೇವಕ ಯೋಜನೆಯನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ವಿಸ್ತರಿಸಲಾಗುವುದು. ಆ ನಂತರ ರಾಜ್ಯದೆಲ್ಲೆಡೆ ವಿಸ್ತರಿಸಲು ಚಿಂತನೆ ನಡೆಸಲಾಗಿದ್ದು, ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.












### ಶೌಚಾಲಯವಾಗಿ ಪರಿವರ್ತನೆಯಾದ ಹಳೆಯ ಬಸ್

ದಾವಣಗೆರೆಯ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಿರ್ಮಿಸಲಾಗಿರುವ ತಾತ್ಕಾಲಿಕ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಹಳೆಯ ಬಸ್ ಒಂದನ್ನು ಮಹಿಳಾ ಶೌಚಾಲಯವನ್ನಾಗಿ ಪರಿವರ್ತಿಸಲಾಗಿದೆ. ವಿನೂತನ ರೀತಿಯಲ್ಲಿ ನಿರ್ಮಿಸಲಾಗಿರುವ ಶೌಚಾಲಯವನ್ನು ಸೋಮವಾರ ಉದ್ಘಾಟಿಸಲಾಯಿತು.



## ನಗರದಲ್ಲಿ ನಾಳೆ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರಸ್ವಾಮಿ ಪುರಾಣ - ಪ್ರವಚನ





ದಾವಣಗೆರೆ,ಜ.19- ಶ್ರೀ ಎಡೆಯೂರು ಸಿದ್ದಲಿಂಗೇಶ್ವರ ಸ್ವಾಮಿ ಪುರಾಣ - ಪ್ರವಚನವು ನಾಡಿದ್ದು ದಿನಾಂಕ 21ರ ಗುರುವಾರ ಸಂಜೆ 6.30ಕ್ಕೆ ಒಂದು ದಿನ ಮಾತ್ರ ನಗರದ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ.

ಶ್ರೀ ಶಿವಯೋಗೀಶ್ವರ ಭಜನಾ ಸಂಘ ಮತ್ತು ಶ್ರೀ ಬಕ್ಕೇಶ್ವರ ಸೇವಾ ಸಮಿತಿ ಇವರ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದೆ ಎಂದು ಪುರಾಣ - ಪ್ರವಚನದ ಸಂಚಾಲಕರೂ ಆಗಿರುವ ಶ್ರೀ ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ ತಿಳಿಸಿದ್ದಾರೆ.

ಪ್ರತಿ ವರ್ಷ ಇಲ್ಲಿ ನಡೆಯುತ್ತಿದ್ದ ಒಂದು ತಿಂಗಳ ಪರ್ಯಂತ ಪುರಾಣ - ಪ್ರವಚನವನ್ನು ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ಈ ಬಾರಿ ಸಾಂಕೇತಿಕವಾಗಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಯಾದಗಿರಿಯ ವೇ. ತೋಟಯ್ಯ ಶಾಸ್ತ್ರಿಗಳು ಪ್ರವಚನವನ್ನು ನಡೆಸಿಕೊಡಲಿದ್ದು, ಶ್ರೀಶೈಲ ಬೀರಾದಾರ ನೀಡುವ ಸಂಗೀತಕ್ಕೆ ಶೇಖರ್ ಇಮ್ಮಡಿ ತಬಲಾ ಸಾಥ್ ನೀಡುವರು. ಪುರಾಣ - ಪ್ರವಚನದ ಉದ್ಘಾಟನೆ ಮತ್ತು ಮಂಗಲೋತ್ಸವ ಕಾರ್ಯಕ್ರಮಗಳು ಅಂದೇ ನಡೆಯಲಿವೆ.

ಗದುಗಿನ ಶ್ರೀ ಪುಟ್ಟರಾಜ ಕವಿ ಗವಾಯಿಗಳವರ ಆಶ್ರಮದ ಶ್ರೀ ಕಲ್ಲಯ್ಯ ಅಜ್ಜನವರು ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ಮತ್ತು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸುವರು. ಕೈಗಾರಿಕೋದ್ಯಮಿ ಅಥಣಿ ಎಸ್.ವೀರಣ್ಣ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು ಎಂದು ಕಾರ್ಯಕ್ರಮದ ಸಹ ಸಂಚಾಲಕರುಗಳಾದ ತೆಲಗಿ ರುದ್ರೇಶ್, ಗುಳ್ಳಪ್ಪ ಮೇಸ್ಟ್ರು ವಿವರಿಸಿದ್ದಾರೆ.

## ಕಾಗೆಗೆ ಹಕ್ಕಿಜ್ವರ

ನವದೆಹಲಿ, ಜ. 19 – ಕೆಂಪು ಕೋಟೆಯಲ್ಲಿ ಸತ್ತಿದ್ದ ಕಾಗೆಯೊಂದರಲ್ಲಿ ಹಕ್ಕಿ ಜ್ವರದ ಸೋಂಕು ಕಂಡು ಬಂದಿರುವ ಹಿನ್ನೆಲೆಯಲ್ಲಿ, ಜ.26ರವರೆಗೆ ಸಾರ್ವಜನಿಕರು ಕೆಂಪು ಕೋಟೆಗೆ ಬರುವುದರ ಮೇಲೆ ನಿರ್ಬಂಧ ಹೇರಲಾಗಿದೆ.

ಕೆಲ ದಿನಗಳ ಹಿಂದೆ ಕೆಂಪು ಕೋಟೆಯಲ್ಲಿ 15 ಕಾಗೆಗಳು ಸತ್ತಿದ್ದವು. ಸತ್ತ ಒಂದು ಕಾಗೆಯ ಮಾದರಿಯನ್ನು ಜಲಂಧರ್‌ನ ಪ್ರಯೋಗಾಲಯಕ್ಕೆ ಕಳಿಸಲಾಗಿತ್ತು.

ಶನಿವಾರದಂದು ದೆಹಲಿಯ ಪ್ರಾಣಿ ಸಂಗ್ರಹಾಲಯದಲ್ಲಿ ಗೂಬೆಯೊಂದು ಹಕ್ಕಿ ಜ್ವರದಿಂದಾಗಿ ಸತ್ತಿದ್ದು ಖಚಿತವಾಗಿತ್ತು.

## ನಗರಕ್ಕೆ ಇಂದು ಟೆಂಗಳಿ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಶಿಕಲಾ ವಿ. ಟೆಂಗಳಿ ಅವರು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ನಿಗಮದ ವಿವಿಧ ಯೋಜನೆಗಳ ಫಲಾನುಭವಿ ಘಟಕಗಳಿಗೆ ಭೇಟಿ ನೀಡಿ, ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಧ್ಯಾಹ್ನ ನಿಗಮದ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವರು.

## ಕೆ.ಆರ್.ಮಾರುಕಟ್ಟೆ ಸುತ್ತಮುತ್ತಲಿನ ಹಣ್ಣಿನ ಮಾರುಕಟ್ಟೆ ಸ್ಥಳಾಂತರ

ದಾವಣಗೆರೆ, ಜ.19- ನಗರದ ಕೆ.ಆರ್ ಮಾರುಕಟ್ಟೆ ಸುತ್ತಮುತ್ತಲಿನ ಸಗಟು ಹಣ್ಣಿನ ಮಾರುಕಟ್ಟೆಯನ್ನು ಸ್ಥಳೀಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಗೊಳಿಸಿ ವ್ಯಾಪಾರ ವಹಿವಾಟು ಪ್ರಾರಂಭಿಸಲಾಗಿದೆ.

ಜಿಲ್ಲೆಯ ಹಾಗೂ ಇತರೆ ಸುತ್ತಮುತ್ತಲಿನ ಜಿಲ್ಲೆಗಳ ಸಮಸ್ತ ರೈತರು ತಮ್ಮ ಉತ್ಪನ್ನಗಳನ್ನು ತಂದು ಮಾರಾಟ ಮಾಡಬಹುದೆಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ತಿಳಿಸಿದ್ದಾರೆ.
















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte